ನೀವು ರೂಪಿಸಿಕೊಂಡ ನಂಬಿಕೆಗಳೇ ನಿಮ್ಮ ಜೀವನವನ್ನು ನಡಿಸುತ್ತಿದ್ದಾವೆ. ಆದರಿಂದ ನಿಮ್ಮ ಜೀವನವನ್ನು ಬದಲಾಯಿಸಲು, ನೀವು ಜಾಗರೂಕರಾಗಿದ್ದು ನಿಮ್ಮ ನಂಬಿಕೆಗಳನ್ನು ಬದಲಾಯಿಸಬೇಕು. ಆಗಲೇ ನೀವು ಹೊಸ ಅನುಭವಗಳನ್ನು ಪಡೆಯುತ್ತೀರಿ. ಇಲ್ಲದಿದ್ದರೆ, ಹಳೆಯ ಅನುಭವಗಳು ಮುಂದುವರಿಯುತ್ತವೆ. ಆದರಿಂದ ನೀವು ಮಾತನಾಡುವ ಪ್ರತಿ ಮಾತನ್ನು, ಹಾಗೆಯೇ ಪ್ರತಿ ಆಲೋಚನೆಯನ್ನು ಗಮನಿಸುತ್ತಾ, ಅವುಗಳಿಗೆ ಸಂಬಂಧಿಸಿದ ನಂಬಿಕೆಗಳನ್ನು ತೊರೆದು ಹೊಸ ನಂಬಿಕೆಗಳನ್ನು ರೂಪಿಸಿಕೊಳ್ಳಿ.

ನಿಮ್ಮ ದೃಷ್ಟಿಯಂತೆ ಸೃಷ್ಟಿ, ಸ್ಥಿತಿಯಂತೆ ಗತಿ ಮತ್ತು ಯದ್ಭಾವಂ ತದ್ಭವತಿ ಎನ್ನುವ ಅಪರಿಮಿತ ನಂಬಿಕೆಗಳನ್ನು (UnLimited beliefs) ರೂಪಿಸಿಕೊಂಡು, ಅವುಗಳನ್ನು ಬಲವಾಗಿ ಹಿಡಿದುಕೊಳ್ಳಿ. ಏಕೆಂದರೆ ಇವು ನಿಮಗೆ ಸದಾ ಹೊಸ ಹೊಸ ಅನುಭವಗಳನ್ನು ನೀಡುತ್ತವೆ. ನಿಮ್ಮ ದೃಷ್ಟಿ, ಸ್ಥಿತಿ ಮತ್ತು ಭಾವನೆಗಳನ್ನು ಬದಲಾಯಿಸಿದಾಗ, ಅದರಂತೆ ಬಾಹ್ಯ ಫಲಿತಾಂಶವೂ ಬದಲಾಗುತ್ತದೆ.

## LIMITED BELIEFS

ಆದರಿಂದ ಚಲನವಿಲ್ಲದ ಪರಿಮಿತವಾದ ನಂಬಿಕೆಗಳನ್ನು (Limited beliefs, Controlled beliefs) ಅಥವಾ ಸ್ಥಿರವಾದ ಅಭಿಪ್ರಾಯಗಳನ್ನು, ಅಂದರೆ...

ಬಿಪಿ ಇಷ್ಟೇ ಇರಬೇಕು, ಶುಗರ್ ಇಷ್ಟೇ ಇರಬೇಕು;

ದೇಹದ ತೂಕ ಇಷ್ಟೇ ಇರಬೇಕು;

ವಯಸ್ಸಾದಂತೆ ಶರೀರವು ದುರ್ಬಲವಾಗುತ್ತದೆ;

ಇದು ಒಳ್ಳೆಯ ಆಹಾರ, ಅದು ಕೆಟ್ಟ ಆಹಾರ; ಅನಾರೋಗ್ಯ ಸಮಸ್ಯೆಗಳಿಗೆ ಪರಿಹಾರವಿಲ್ಲ;

ಆರ್ಥಿಕವಾಗಿ ಯಾವಾಗಲೂ ಕೊರತೆ ಇರುತ್ತದೆ; ಸಂಬಂಧಗಳಿಗೆ ಅತೀತವಾಗಿ ತಲುಪಲಾಗುವುದಿಲ್ಲ;

ಕೋಪವಿರಬಾರದು; ಸದಾ ಶಾಂತವಾಗಿರಬೇಕು;

ಇದು ಒಳ್ಳೆಯ ಗುಣ, ಅದು ಕೆಟ್ಟ ಗುಣ;

ಇದು ಒಳ್ಳೆಯ ಆಲೋಚನೆ, ಅದು ಕೆಟ್ಟ ಆಲೋಚನೆ;

ಇದು ಒಳ್ಳೆಯ ಎಮೋಷನ್, ಅದು ಕೆಟ್ಟ ಎಮೋಷನ್;

ಇದು ಒಳ್ಳೆಯ ಭಾವನೆ, ಅದು ಕೆಟ್ಟ ಭಾವನೆ;

ಶರೀರ ಮನಸ್ಸು ಮತ್ತು ಗುಣಗಳ ಕೈಯಲ್ಲಿ ನಾನು ಕೀಲುಗೊಂಬೆ;

ಆಡುವುದು ನಾನು ಆಡಿಸುವುದು ದೈವ (ದೇವರು);

ಕಾರ್ಯ ನಾನು ಕಾರಣ ದೈವ;

ಸೀಮಿತ ನಾನು, ಅಸೀಮಿತ ದೈವ;

ಯಾವುದು ನನ್ನ ಕೈಯಲ್ಲಿಲ್ಲ;

ಇದು ಪಾಪ, ಅದು ಪುಣ್ಯ, ಪಾಪ - ಪುಣ್ಯಗಳಾಚೆ ನಾನು ಹೋಗಲಾರೆ;

ಪ್ರಾರಬ್ಧದಂತೆ ನಮ್ಮ ಜೀವನವು ನಡೆಯುತ್ತದೆ, ನಾವು ಇಚ್ಛಿಸಿದಂತೆ ಫಲವು ಕೂಡಲೇ ಸಿಗುವುದಿಲ್ಲ;

ನಾನು ಒಳ್ಳೆಯದಾಗಿ ಅಥವಾ ಪ್ರಶಾಂತವಾಗಿದ್ದರೆ ಮಾತ್ರ ದೇವರು ಪ್ರತ್ಯಕ್ಷವಾಗುತ್ತಾನೆ;

ಇದು ಒಳ್ಳೆಯ ಸ್ಥಳ, ಅದು ಕೆಟ್ಟ ಸ್ಥಳ; ಇದು ಅಶುದ್ಧ ವಾತಾವರಣ;

ಇದು ಮಾಯಾ ಲೋಕ; ನಾನು ಒಮ್ಮೆಲೇ ಒಂದೇ ಶರೀರದಲ್ಲಿ ಒಂದೇ ಸ್ಥಳದಲ್ಲಿ ಇರುತ್ತೇನೆ;

ನಾವೆಲ್ಲರೂ ಒಂದೇ ಜಗತ್ತಿನಲ್ಲಿ ಇದ್ದೇವೆ;

ಇದು ಒಳ್ಳೆಯ ಕಾಲ, ಅದು ಕೆಟ್ಟ ಕಾಲ; ಇದು ಒಳ್ಳೆಯ ಸಮಯ, ಅದು ಕೆಟ್ಟ ಸಮಯ;

ಈ ಗ್ರಹಗಳು ಒಳ್ಳೆಯವು, ಆ ಗ್ರಹಗಳು ಕೆಟ್ಟವು;

ಇದು ಕಲಿಯುಗ; ನನ್ನದು ಪರಿಮಿತವಾದ ಶರೀರ, ಪರಿಮಿತವಾದ ಮನಸ್ಸು;

ನನ್ನ ಇಂದ್ರಿಯಗಳು ದೇಹಕ್ಕೆ ಮಾತ್ರ ಸೀಮಿತ...

ಇತ್ಯಾದಿ ವೃದ್ಧಿಗೆ ಅವಕಾಶವಿಲ್ಲದ ನಂಬಿಕೆಗಳನ್ನು ಬಿಟ್ಟುಬಿಡಿ. ಏಕೆಂದರೆ ಇವು ನಿಮ್ಮನ್ನು ಮಿತಿಗೊಳಿಸಿ ಬಂಧಿಸುತ್ತವೆ.

## UNLIMITED BELIEFS

ನಾವು ಆಯ್ಕೆ ಮಾಡಿಕೊಂಡದ್ದೆಲ್ಲ ನೆರವೇರಬೇಕೆಂಬ ಆಶೆಯು ನಮ್ಮೆಲ್ಲರಿಗೂ ಇರುವುದರಿಂದ, ನಾನು ಸೂಚಿಸುವ ಸ್ವೇಚ್ಛೆಯಿಂದ ಕೂಡಿದ ನಂಬಿಕೆಗಳನ್ನು ಆಯ್ಕೆ ಮಾಡಿಕೊಳ್ಳಿ (choose freedom beliefs, unlimited beliefs):

ನಾನು ಇಟ್ಟುಕೊಳ್ಳುವ ಸಂಕಲ್ಪಕ್ಕೆ, ನಾನು ನಿರ್ವಹಿಸುವ ಪಾತ್ರಕ್ಕೆ ತಕ್ಕಂತೆ-

ಬಿಪಿ ಶುಗರ್ ರೀಡಿಂಗ್ಸ್ ಇರಬೇಕು, ದೇಹದ ಆಕೃತಿ ಇರಬೇಕು, ದೇಹದ ತೂಕವು ಇರಬೇಕು;

ಸದಾ ಶರೀರ ತಾಜವಾಗಿ ನವ್ಯ ನೂತನವಾಗಿ (ಹೊಸತಾಗಿ) ದಿವ್ಯವಾಗಿ ದೈವ ಕಣಗಳಿಂದ (God particles) ತುಂಬಿರುತ್ತದೆ;

ಎಲ್ಲವೂ ದಿವ್ಯವಾದ ಆಹಾರಗಳೇ, ಎಲ್ಲವೂ ದಿವ್ಯವಾದ ಗುಣಗಳೇ, ಎಲ್ಲವೂ ದಿವ್ಯವಾದ ಆಲೋಚನೆಗಳೇ, ಎಲ್ಲವೂ ದಿವ್ಯವಾದ ಎಮೋಷನ್ಸ್, ಎಲ್ಲವೂ ದಿವ್ಯವಾದ ಭಾವನೆಗಳೇ, ಎಲ್ಲವೂ ದಿವ್ಯವಾದ ಕಾಲಗಳೇ (ಅವಧಿಗಳು);

ಎಲ್ಲವೂ ದಿವ್ಯವಾದ ಸಮಯಗಳೇ, ಎಲ್ಲವೂ ದಿವ್ಯವಾದ ಸ್ಥಳಗಳೇ, ಎಲ್ಲವೂ ದಿವ್ಯವಾದ ಗ್ರಹಗಳೇ;

ಎಲ್ಲವೂ ದಿವ್ಯವಾದ ಯುಗಗಳೇ; ಇದು ದಿವ್ಯವಾದ ವಾತಾವರಣ;

ದೇಹ ಮನಸ್ಸು ಮತ್ತು ಗುಣಗಳು ನನ್ನ ಕೈಯಲ್ಲಿ ಕೀಲುಗೊಂಬೆಗಳು;

ಆಡುವುದು ದೈವವೇ ಆಡಿಸುವುದು (ಆಡುವಂತೆ ಮಾಡುವುದು) ದೈವವೇ ಅಥವಾ ಆಡುವುದು ನಾನೇ (creation) ಆಡಿಸುವುದು ನಾನೇ (creator);

ಕಾರ್ಯವು ದೈವವೇ ಕಾರಣವೂ ದೈವವೇ ಅಥವಾ ಕಾರ್ಯವು ನಾನೇ ಕಾರಣವೂ ನಾನೇ;

ಪರಿಮಿತವೂ ದೈವವೇ ಅಪರಿಮಿತವೂ ದೈವವೇ ಅಥವಾ ಪರಿಮಿತವೂ ನಾನೇ ಅಪರಿಮಿತವೂ ನಾನೇ;

ವಿಶ್ವವೇ ನನ್ನ ಕೈಯಲ್ಲಿದೆ;

ನಾನು ಯಾವುದೇ ಗುಣಗಳನ್ನು ಹೊಂದಿದರು ದೇವರು ಪ್ರತ್ಯಕ್ಷವಾಗುತ್ತಾನೆ;

ಎಲ್ಲರೂ ಒಂದೇ ಲೋಕದಲ್ಲಿಲ್ಲ, ಪ್ರತಿಯೊಬ್ಬರೂ ತಮ್ಮದೇ ಆದ ಲೋಕದಲ್ಲಿ ಇದ್ದಾರೆ;

ಇದು ದಿವ್ಯವಾದ ಪ್ರಪಂಚ, ನಾನು ಏಕಕಾಲದಲ್ಲಿ ಅನೇಕ ದೇಹಗಳಲ್ಲಿ ಅನೇಕ ಪ್ರದೇಶಗಳಲ್ಲಿ ಇರುತ್ತೇನೆ;

ಅನಂತವಾದ ವಿಶ್ವ ಶರೀರವೇ ನನ್ನ ಶರೀರ, ಅನಂತವಾದ ವಿಶ್ವ ಮನಸೇ ನನ್ನ ಮನಸ್ಸು;

ನನ್ನ ಇಂದ್ರಿಯಗಳು ಅನಂತವಾಗಿ ವಿಶ್ವ ವ್ಯಾಪ್ತವಾಗಿವೆ (ಬ್ರಹ್ಮಾಂಡಾದ್ಯಂತ);

ಎಲ್ಲಾ ಅನಾರೋಗ್ಯ ಸಮಸ್ಯೆಗಳಿಗೆ (ಕಾಯಿಲೆಗಳಿಗೆ) ದಿವ್ಯವಾದ ಪರಿಹಾರವಿದೆ;

ಆರ್ಥಿಕವಾಗಿ ಸದಾ ಸಮೃದ್ಧಿಯಾಗಿರುತ್ತೇನೆ;

ಬಂಧನಗಳಾತೀತವಾಗಿ ಸುಲಭವಾಗಿ ತಲುಪುತ್ತೇನೆ;

ಪಾಪಪುಣ್ಯಗಳಾತೀತವಾಗಿ ಸುಲಭವಾಗಿ ತಲುಪುತ್ತೇನೆ;

ನಾನು ಯೋಚಿಸಿದ ಕ್ಷಣವೇ ಫಲಿಸುತ್ತದೆ;

ಶರೀರವು ಹೇಗಿದ್ದರೂ ನಾನು ಆನಂದವಾಗಿ ಇರುತ್ತೇನೆ;

ಮನಸ್ಸು ಹೇಗಿದ್ದರೂ ನಾನು ಆನಂದವಾಗಿ ಇರುತ್ತೇನೆ;

ಬುದ್ಧಿ ಹೇಗಿದ್ದರೂ ನಾನು ಆನಂದವಾಗಿ ಇರುತ್ತೇನೆ;

ಯಾರು ಹೇಗಿದ್ದರೂ ನಾನು ಆನಂದವಾಗಿ ಇರುತ್ತೇನೆ;

ಪ್ರಪಂಚ (ಜಗತ್ತು) ಹೇಗಿದ್ದರೂ ನಾನು ಆನಂದವಾಗಿ ಇರುತ್ತೇನೆ;

ಸಮಸ್ಯೆಗಳಲ್ಲಿಯೂ ಕಷ್ಟ ಸುಖಗಳಲ್ಲಿಯೂ ಸಹ ನಾನು ಆನಂದವಾಗಿರುತ್ತೇನೆ;

ಉಚ್ಚ ನೀಚ ಸ್ಥಿತಿಗಳಲ್ಲಿಯೂ ಸಹ ನಾನು ಆನಂದವಾಗಿರುತ್ತೇನೆ;

ವರ್ತಮಾನದ ಸ್ಥಿತಿ ಹೇಗಿದ್ದರೂ ನಾನು ಆನಂದವಾಗಿರುತ್ತೇನೆ;

ಪ್ರಾರಬ್ಧದ ಪ್ರಕಾರವಲ್ಲದೆ ಆನಂದವಾಗಿರುವಾಗ  ನಾನು ಏನು ಯೋಚಿಸುತ್ತೇನೆಯೋ ಅದು ಸಂಭವಿಸುತ್ತದೆ ...(ಏನು ಅಂದುಕೊಂಡರೆ ಅದೇ ನಡೆಯುತ್ತದೆ...)

ಈ ವಿಧವಾದ ಸ್ವೇಚ್ಛೆಯಿಂದ ಕೂಡಿದ ಬೇಷರತ್ತಾದ (unconditional) ನಂಬಿಕೆಗಳನ್ನು ಬಲವಾಗಿ ಹಿಡಿದುಕೊಳ್ಳಿ. ಏಕೆಂದರೆ 'ನಾನು' ಎಂದರೆ ಯಾವುದರ ಮೇಲೆಯೂ ಆಧಾರಪಡದ ಆನಂದ (independent bliss).

ಆದರಿಂದ ಪರಿವರ್ತನೆಗೆ ಅವಕಾಶವಿಲ್ಲದ ನಂಬಿಕೆಗಳನ್ನು ಬಲವಾಗಿ ಹಿಡಿದುಕೊಳ್ಳುವುದು  ಮೂಢನಂಬಿಕೆಯೇ ಆಗುತ್ತದೆ. ಏಕೆಂದರೆ ಚಲಿಸುವ ಶಕ್ತಿಯ ಸ್ವಭಾವ ಸದಾ ಬದಲಾಗುತ್ತಾ  ಪರಿವರ್ತನೆಯಾಗುತ್ತಾ ಇರುತ್ತದೆ. ಆದರಿಂದ ಪರಿಮಿತ ನಂಬಿಕೆಗಳೆಲ್ಲ ಮೂಢನಂಬಿಕೆಗಳೇ (ಅಂಧವಿಶ್ವಾಸವೇ) ಎಂದು ಗ್ರಹಿಸಿ.

ಆದರಿಂದ ನೀವು ಸದಾ ತೆರೆದ ಮನಸ್ಸಿನಿಂದ, ತೆರೆದ ಹೃದಯದಿಂದ ಇರಬೇಕು.

ಅಂದರೆ ಯದ್ಭಾವಂ ತದ್ಭವತಿ, ದೃಷ್ಟಿಯಂತೆ ಸೃಷ್ಟಿ, ಸ್ಥಿತಿಯಂತೆ ಗತಿ,

ಯಾವುದಾದರೂ ಸರಿ ಆಲೋಚಿಸಿದ ತಕ್ಷಣವೇ ಪ್ರತ್ಯಕ್ಷವಾಗುತ್ತದೆ ಮಾಯವಾಗುತ್ತದೆ..

ಹೀಗೆ ಸ್ವೇಚ್ಛದೊಂದಿಗೆ ಅಪರಿಮಿತವಾದ ನಂಬಿಕೆಗಳನ್ನು ಬಲವಾಗಿ ಹಿಡಿದುಕೊಳ್ಳಿ.

ಸ್ಪಷ್ಟವಾಗಿ ಹೇಳಬೇಕೆಂದರೆ: ನನ್ನ ಹೆಸರು ಇದು, ನನ್ನ ರೂಪ ಇಂತದ್ದು, ನನ್ನ ಬಣ್ಣ ಇದು, ನನ್ನ ಶರೀರದ ತೂಕವು ಇಷ್ಟು, ನನ್ನ ಊರು ಇದು, ನಾನು ಆ ದಿನ ಹುಟ್ಟಿದ್ದೇನೆ, ಈಗ ನನ್ನ ವಯಸ್ಸು ಇಷ್ಟು, ನಾನು ಈ ಊರಿನಲ್ಲಿ ಹುಟ್ಟಿದ್ದೇನೆ, ನಾನು ಈ ಸ್ಥಳದಲ್ಲಿ ಬೆಳೆದಿದ್ದೇನೆ, ನಾನು ಈಗ ಈ ಊರಿನಲ್ಲಿ ಇದ್ದೇನೆ, ನನ್ನ ಗೋತ್ರ ಇದು, ನನ್ನ ಕುಲ ಇದು, ನನ್ನ ಮತ ಇದು, ನನ್ನ ಪ್ರದೇಶ ಇದು, ನಾನು ಈ ದೇಶದಲ್ಲಿ ಹುಟ್ಟಿದ್ದೇನೆ, ನಾನು ಒಳ್ಳೆಯವನು, ನನಗೆ ಇಷ್ಟು ಆಸ್ತಿ ಇದೆ, ನಾನು ಭೂಮಿಯ ಮೇಲೆ ಇದ್ದೀನಿ, ಇದು ನನ್ನ ಲಕ್ಕಿ ನಂಬರ್... ಇತ್ಯಾದಿ ಪರಿಮಿತ ನಂಬಿಕೆಗಳೆಂದು;

ಹಾಗೆ ಎಲ್ಲಾ ಹೆಸರುಗಳು ನನ್ನವೆ, ಎಲ್ಲ ರೂಪಗಳು ನನ್ನವೆ, ಎಲ್ಲಾ ಬಣ್ಣಗಳು ನನ್ನವೆ, ನಾನು ಹುಟ್ಟಿಲ್ಲ, ನನಗೆ ವಯಸ್ಸು ಇಲ್ಲ, ಎಲ್ಲಾ ನನ್ನ ಲಕ್ಕಿ ನಂಬರ್ ಗಳೇ, ಎಲ್ಲ ಊರುಗಳು ನನ್ನವೆ, ಎಲ್ಲಾ ಕುಲಗಳು ನನ್ನವೆ, ಎಲ್ಲಾ ಮತಗಳು ನನ್ನವೆ, ಎಲ್ಲಾ ಆಸ್ತಿಗಳು- ಸಾಲಗಳು ನನ್ನವೆ, ಎಲ್ಲ ಗುಣಗಳು ನನಗೆ ಇದ್ದಾವೆ, ಗುಣಗಳಿಗೆ ಅತೀತವಾಗಿ ಸಹ ನಾನು ಇದ್ದೀನಿ, ನಾನು ವಿಶ್ವವೆಲ್ಲ ವ್ಯಾಪಿಸಿಕೊಂಡು ಇದ್ದೀನಿ.. ಇತ್ಯಾದಿ ಅಪರಿಮಿತವಾದ ನಂಬಿಕೆಗಳೆಂದು ಇಲ್ಲಿ ಗ್ರಹಿಸಿ.

## ಒರಿಜಿನಲ್ ದೈವ-Man Made God

ಈ ಸೃಷ್ಟಿಯಲ್ಲಿ ಚಲಿಸದ ಶಕ್ತಿ - ಚೈತನ್ಯ 50%, ಎಲ್ಲಾ ಕಡೆ ಚಲಿಸುವ ನಿರಾಕಾರ ಶಕ್ತಿ - ಚೈತನ್ಯ 49%, ಶಕ್ತಿ - ಚೈತನ್ಯದಿಂದ ನಿರ್ಮಿತವಾದ ನಾಮರೂಪ ಕ್ರಿಯೆಗಳು 1% ಇರುತ್ತವೆ. ಅಂದರೆ ನಿರಾಕಾರ 99% - ಆಕಾರಗಳು 1%; ಚಲಿಸುವುದು 50%, ಅಚಲ 50% ಇರುತ್ತವೆ ಎಂದು ಅರ್ಥ. ಈ ನಿರಾಕಾರ ಶಕ್ತಿ - ಚೈತನ್ಯದ ಸಂಯೋಜನೆಯನ್ನು ಸಚ್ಚಿದಾನಂದ ಸ್ವರೂಪ ಎಂದು ಸಹ ಹೇಳುತ್ತಾರೆ.

ಈ ಚಲಿಸುವ 49% ಶಕ್ತಿ ಹಾಗೆಯೇ ಅಚಲ 50% ಶಕ್ತಿ - ಪ್ರತ್ಯಕ್ಷವಾಗದೆ ಯಾರು ಯಾವುದು ತಡೆಯಲು ಸಾಧ್ಯವಿಲ್ಲ. ಏಕೆಂದರೆ ಇವು ಸೂಕ್ಷ್ಮಾತಿ ಸೂಕ್ಷ್ಮವಾಗಿ ಇದ್ದು, ಸದಾ ಪ್ರತ್ಯಕ್ಷವಾಗಿಯೇ (ಸರ್ವವ್ಯಾಪಿಯಾಗಿ) (Omnipresent) ಇರುತ್ತವೆ. ಹಾಗೆ ಈ ದೈವ ನಿರಾಕಾರವಾಗಿ ಇರುತ್ತಲೇ, ಜೀವಜಗದೀಶ್ವರಗಳಂತೆ ಸಹ ಒಮ್ಮೆಲೆ ನಟಿಸುತ್ತಿದ್ದಾನೆ (monism). ಆದರಿಂದ ನಿರಾಕಾರವನ್ನು ಮತ್ತು ಆಕಾರವನ್ನು ಬೇರ್ಪಡಿಸಲಾಗುವುದಿಲ್ಲ. ಅಂದರೆ ದೈವವನ್ನು ಒಳ್ಳೆಯದನ್ನು ಅಥವಾ ದೈವವನ್ನು ಕೆಟ್ಟದ್ದನ್ನು ಬೇರ್ಪಡಿಸಲು ಸಾಧ್ಯವಿಲ್ಲ, ಏಕೆಂದರೆ ಅವು ಸದಾ ಹಾಲು ನೀರಿನಂತೆ, ಆಟಿಕೆಗಳಂತೆ ಬೆರೆತು ಏಕವಾಗಿರುತ್ತವೆ.

ಆದರಿಂದ ಎಲ್ಲವನ್ನೂ ನೋಡುತ್ತಿದ್ದಾಗ - ಇದು ನಿರಾಕಾರವೆಂದು, ಅದು ಆಕಾರವೆಂದು, ಇದು ಆರೋಗ್ಯವೆಂದು, ಅದು ಅನಾರೋಗ್ಯವೆಂದು, ಇದು ಒಳ್ಳೆಯದೆಂದು, ಅದು ಕೆಟ್ಟದ್ದೆಂದು, ಇದು ಕುರ್ಚಿ ಎಂದು, ಅದು ಹಾಸಿಗೆ ಎಂದು, ಇದು ಪ್ರಪಂಚವೆಂದು, ನಾವು ಜೀವಿಗಳೆಂದು, ದೇವರು ಎಲ್ಲೋ ಇದಾನೆ ಎಂದು; ಹೀಗೆ ಎಲ್ಲವನ್ನೂ ನಿರ್ಣಯಿಸಿ, ಅವುಗಳನ್ನು ನಾಮ ರೂಪ ಕ್ರಿಯೆಗಳೊಂದಿಗೆ ಬಂಧಿಸಿ, ಅದನ್ನು ಕುರುಡಾಗಿ ನಂಬಬೇಡಿ.

ನಿಮ್ಮ ಬಳಿ ಎಷ್ಟೇ ದೊಡ್ಡ ಸಮಸ್ಯೆವಿದ್ದರೂ ಅದರ ಮೌಲ್ಯ ಕೇವಲ 1% ಮಾತ್ರವೇ, ಹಾಗೆಯೇ ನಾನು ಮಾತುಗಳ ರೂಪದಲ್ಲಿ ನೀಡುವ ಅತ್ಯುತ್ತಮ ಪರಿಹಾರವು 1% ಮಾತ್ರ ಮೌಲ್ಯ ಹೊಂದಿದೆ.

ಆದುದರಿಂದ ಏನನ್ನು ನೋಡುತ್ತಿದ್ದರು....

ನಾನು ರೂಪವಾಗಿ 1% ನಿರಾಕಾರವಾಗಿ 99% ಇದ್ದೇನೆ,

ನೀನು ಸಹ ರೂಪವಾಗಿ 1% ನಿರಾಕಾರವಾಗಿ 99% ಇದ್ದೀಯ ಎಂದು ಜಡ್ಜ್ ಮಾಡಿ.

ಅಂದರೆ ನೀನು 1% ಪರಿಮಿತವಾಗಿ 99% ಅಪರಿಮಿತವಾಗಿದ್ದೀಯ, ನಾನು 1% ಪರಿಮಿತವಾಗಿ 99% ಅಪರಿಮಿತವಾಗಿದ್ದೀನಿ ಎಂದು ತೀರ್ಮಾನಿಸಿ. ಆದುದರಿಂದ ಕೇವಲ 1% ಇರುವ ದ್ವಂದ್ವಗಳ ಮೇಲೆ ದೃಷ್ಟಿಯನ್ನು ಇಡದೆ, 99% ಇರುವ ಮೌನ ಅಥವಾ ದೈವ ಅಥವಾ ಏಕತ್ವದ ಮೇಲೆ ನಿಮ್ಮ ಗಮನವನ್ನು ನಿಲ್ಲಿಸಿ.

ಹಾಗೆಯೇ ದೈವ ಅಥವಾ ಶಕ್ತಿ - ಚೈತನ್ಯ ಸಹಾಯವಿಲ್ಲದೆ ನಾನು ಏನು ಮಾಡಲಾರೆ; ದೈವದ ಕೈಯಲ್ಲಿ ನಾನು ಕೀಲುಗೊಂಬೆ; ಇರುವುದೇ ಅಪರಿಮಿತವಾದ 'ನಾನು'; ಅಪರಿಮಿತ ದೈವವೇ; (Omni presence means all present), ಸೀಮಿತವಾದ 'ನಾನು' ಗೆ ಅಸ್ತಿತ್ವವೇ ಇಲ್ಲ. ಆದುದರಿಂದ ಸ್ವತಹ ನಾನು ಏನು ಮಾಡಲಾರೆ; ಅಜ್ಞಾನದಿಂದ ಪಾಪ ಪುಣ್ಯಗಳನ್ನು ನಾನು ಮಾಡಿದ್ದೇನೆ ಎಂದು ಇದುವರೆಗೆ ಕುರುಡಾಗಿ ನಂಬಿದ್ದೇನೆ ಎಂಬುದನ್ನು ನೀವು ಗುರುತಿಸಿ.

ಇಷ್ಟು ದಿನ ನಾನು ಮಾಡಿದ ಪಾಪಗಳಿಂದಲೇ ದೈವವು ಪ್ರತ್ಯಕ್ಷವಾಗುತ್ತಿಲ್ಲ ಎಂದು ನಾವು ಬಲವಾಗಿ ನಂಬಿದ್ದೇವೆ. ಹೀಗಾಗಿ ಕರ್ಮ- ವಿಧಿಲಿಖಿತ - ಪ್ರಾರಬ್ಧದ ಕಾರಣದಿಂದಲೇ ದೈವವು ಪ್ರತ್ಯಕ್ಷವಾಗುತ್ತಿಲ್ಲವೆಂದು, ಇಂತಹ ನಂಬಿಕೆಗಳನ್ನು ಸಹ ಬಲವಾಗಿ ಹಿಡಿದುಕೊಳ್ಳದೆ, ಅವುಗಳೊಂದಿಗೆ ಅಂಟದಂತೆ ಇರಿ.

ನನ್ನ ಸೀಮಿತ ನಂಬಿಕೆಗಳಿಂದ ಪ್ರಭಾವಿತವಾಗಿ, ಎಲ್ಲಿಯೂ ಪ್ರತ್ಯಕ್ಷವಾಗಲಾರದ ದೈವ ನನಗೆ ಬೇಡ ಎಂದು ಭಾವಿಸಿ ಆ ದೈವವನ್ನು ಬಿಟ್ಟುಬಿಡಿ. ಏಕೆಂದರೆ ನಮ್ಮ ಅವಗಾಹನೆ (ಅರಿವಿನ), ನಮ್ಮ ಅನುಭವ ಜ್ಞಾನವನ್ನು ಆಧರಿಸಿ ನಾವು ಈ ದೈವವನ್ನು ಕಲ್ಪಿಸಿ ಸೃಷ್ಟಿಸಿದ್ದೇವೆ (Man made God). ಈ ದೈವವು ನಮ್ಮನ್ನು ಸೃಷ್ಟಿಸಿದ ಮೂಲ (ಒರಿಜಿನಲ್) ದೈವವಲ್ಲ.

## ವರ್ಣನೆಯಾತೀತ

ಸೃಷ್ಟಿಕರ್ತನಿಗೆ ಸೃಷ್ಟಿಯ ಮೇಲೆ ಹಕ್ಕು ಇಲ್ಲ ಎಂಬ ನಂಬಿಕೆಗಳು ನಮ್ಮಲ್ಲಿವೆ. ಇಲ್ಲಿ ಜೀವಜಗದೀಶ್ವರರು ಸೃಷ್ಟಿ, ಅಪರಿಮಿತ ದೈವವೂ ಸೃಷ್ಟಿಕರ್ತ (Omnipotence, meaning all powerful). ಸೃಷ್ಟಿಸಿದ ದೈವಕ್ಕೆ ಸೃಷ್ಟಿಯ ಮೇಲೆ ಸಂಪೂರ್ಣ

ಹಕ್ಕುಗಳಿವೆ. ಅವರು ಯಾವಾಗ ಬೇಕಾದರೂ ಏನನ್ನಾದರೂ ಸೃಷ್ಟಿಸಿ, ಇದು ಸಾಕು ಎಂದುಕೊಂಡರೆ ಅದನ್ನು ಲಯವಾಗಿಸುವುದು ಸಾಧ್ಯ.

ನಡೆದಿರುವದು, ನಡೆಯುತ್ತಿರುವುದು, ನಡೆಯುವುದು ಎಲ್ಲಾ ಪರ್ಫೆಕ್ಟ್ ಆಗಿ ದಿವ್ಯವಾಗಿದೆ ಎಂಬ ಭಾವನೆಯಲ್ಲಿ ಸದಾ ಇರುತ್ತಾನೆ, ಏಕೆಂದರೆ ಅವರಿಗೆ ಯಾವುದು ಅನ್ಯವಿಲ್ಲ. ಪ್ರತಿಯೊಂದು ಚಲನೆಯು ಭಗವಂತನದೆ, ಆದರೆ ನಾವು ಚಲಿಸುತ್ತಿದ್ದೇವೆ ಎಂದು ಭ್ರಮಿಸುತ್ತಿದ್ದೇವೆ. ಹೀಗಾಗಿ ನಮ್ಮ ಜೀವನ ನಮ್ಮ ಕೈಯಲ್ಲಿ ಯಾವ ಮಾತ್ರವೂ ಇಲ್ಲ, ಇಡಿ ಭೂತಕಾಲ, ಭವಿಷ್ಯಕಾಲ, ವರ್ತಮಾನಗಳ ಬಗ್ಗೆ ತಿಳಿದಿರುವ ದೈವದ ಕೈಯಲ್ಲಿ ಎಲ್ಲವೂ ಇದೆ (Omniscience, meaning all knowing) ಎಂಬುದನ್ನು ಅರಿತು, ದೈವಕ್ಕೆ ಶರಣಾಗಿ.

ಒರಿಜಿನಲ್ ದೈವದ ಸ್ಥಿತಿಯನ್ನು, ಅವರ ಗುಣಗಳನ್ನು, ಅವರ ಪ್ರತಿಕ್ರಿಯೆ ಮಾಡುವ ರೀತಿ, ಅವರು ಯಾರಿಗೆ ಮುಕ್ತಿಯನ್ನು ನೀಡುತ್ತಾರೆ ಮೊದಲಾದ ವಿಷಯಗಳನ್ನು ನಾವು ಮಾತುಗಳಲ್ಲಿ ಸ್ಪಷ್ಟವಾಗಿ ವಿವರಿಸಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಅವರು ವರ್ಣನೆಯಾತೀತ, ಹಾಗೆಯೇ ಅವರ ಕಾರ್ಯಗಳು ಸಹ ವರ್ಣನಾತೀತವಾಗಿರುತ್ತವೆ. ಆದರಿಂದ ನಮ್ಮ ಕಾರ್ಯಗಳಿಂದ, ನಮ್ಮ ಬುದ್ಧಿಯಿಂದ, ನಮ್ಮ ಸಾಧನೆಯಿಂದ ದೈವವನ್ನು ನಿಯಂತ್ರಿಸಬಹುದು ಎಂದು, ದೈವವನ್ನು ಆಕರ್ಷಿಸಬಹುದು ಎಂದು ಬಲವಾಗಿ ನಂಬಬೇಡಿ. ಆದರಿಂದ ದೈವ ಮತ್ತು ದೈವಸೃಷ್ಟಿಗೆ ಸಂಬಂಧಿಸಿ ನಮಗಿರುವ ಎಲ್ಲಾ ನಂಬಿಕೆಗಳನ್ನು ಬಿಟ್ಟು ಪ್ರಶಾಂತವಾಗಿ, ಮೌನವಾಗಿ ಇರುವುದೇ ಉತ್ತಮ.

ಇಲ್ಲಿ ದೈವವಲ್ಲದೆ ಬೇರೆ ಯಾವುದು ಇಲ್ಲ, ಆದರಿಂದ ನಾವು ದೈವವನ್ನು ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ನಾವು ಮಾತಾಡದೆ ಇರಲು ಸಾಧ್ಯವಿಲ್ಲ, ಆದರಿಂದ ನಮ್ಮ ಮಾತುಗಳು ಕೊನೆಗೆ ಮೌನಕ್ಕೆ ದಾರಿತೊಡಗಬೇಕು. ಹಾಗೆಯೇ ದೈವವು ನಮ್ಮನ್ನು ಸೃಷ್ಟಿಸಿದ್ದಾನೆ ಎಂಬುದಾಗಿ ಭಾವಿಸಿದರೆ, ದೈವದಿಂದ ದೈವವೇ ಬರುತ್ತದೆ, ಮಾನವನಲ್ಲ. ಕಾರಣದಿಂದ ಕಾರಣವೇ ಬರುತ್ತದೆ, ಕಾರ್ಯವಲ್ಲ. ಪೂರ್ಣದಿಂದ ಪೂರ್ಣವೇ ಬರುತ್ತದೆ, ಅಪೂರ್ಣವಲ್ಲ. ಪರಮಾತ್ಮನಿಂದ ಪರಮಾತ್ಮನೇ ಬರುತ್ತಾನೆ, ಜೀವಾತ್ಮ ಅಲ್ಲ. ಆದರಿಂದ ನಮ್ಮ ನಾಮರೂಪಕ್ರಿಯೆಗಳನ್ನು, ನಮ್ಮ ಕಷ್ಟಸುಖಗಳನ್ನು ಸಹ ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ನಾಮರೂಪಕ್ರಿಯೆಗಳು, ಕಷ್ಟಸುಖಗಳು ಸಹ ದಿವ್ಯವಾಗಿವೆ.

ಎರಡನೆಯದು ಇದ್ದಾಗ ಮಾತ್ರ ಅದನ್ನು ಅರ್ಥಮಾಡಿಕೊಳ್ಳಲು ಮಾತುಗಳಲ್ಲಿ ವರ್ಣಿಸಲು ಸಾಧ್ಯ. ಆದರೆ ಒಂದೇ ಇದ್ದರೆ ಅರ್ಥಮಾಡಿಕೊಳ್ಳಲು ವರ್ಣಿಸಲು ಏನೂ ಇರುವುದಿಲ್ಲ. ಕೇವಲ ಅದರೊಂದಿಗೆ ಏಕವಾಗಬೇಕು, ಬೇರೆ ಏನೂ ಮಾಡಲು ಸಾಧ್ಯವಿಲ್ಲ. ನಿದ್ರೆಯಲ್ಲಿರುವಾಗ ನಾವು ಇದನ್ನೇ ಮಾಡುತ್ತಿದ್ದೇವೆ, ಆದರೆ ಅಲ್ಲಿ ನಮಗೆ ಅರಿವು ಇಲ್ಲ. ನಿದ್ರೆಯಲ್ಲಿಯೂ ಅರಿವು ಇದ್ದರೆ ಅದೇ ಮುಕ್ತಸ್ಥಿತಿ. ಹೀಗಾಗಿ ಎಲ್ಲಾ ಪರಿಸ್ಥಿತಿಗಳಲ್ಲಿ ನೀವು ಮಾತುಗಳಲ್ಲಿ ವರ್ಣಿಸಲಾಗದ ಸ್ಥಿತಿಗೆ ತಲುಪಿ, ಅದರಲ್ಲಿಯೇ ಸಾಕಷ್ಟು ಸಮಯ ಅರಿವಿನಲ್ಲಿಯೇ ಇದ್ದಾಗ ಬ್ರಹ್ಮಾನಂದಸ್ಥಿತಿ ಅಥವಾ ಸಚ್ಚಿದಾನಂದಸ್ಥಿತಿ ಪ್ರತ್ಯಕ್ಷವಾಗುತ್ತದೆ.

ಹೀಗಾಗಿ ನಿಮ್ಮ ಸಮಸ್ಯೆಗೆ ಕಾರಣವು - ಅವನು, ಅವರು, ಇದು-ಅದು ಅಥವಾ ನಾನು ಅಥವಾ ಪರಮಾತ್ಮ ಎಂದು ನೀವು ಮಾತುಗಳಲ್ಲಿ ವರ್ಣಿಸಲು ಸಾಧ್ಯವಿಲ್ಲದ ಸ್ಥಿತಿಗೆ ಬಂದಾಗಲೇ ನಿಮಗೆ ದಿವ್ಯವಾದ ಸ್ಥಿತಿ ಪ್ರತ್ಯಕ್ಷವಾಗುತ್ತದೆ, ತಕ್ಷಣವೇ

ಫಲಿತವು ಲಭಿಸುತ್ತದೆ. ಅಂದರೆ ಪರಮಾತ್ಮ ಸಹ ಕಾರಣವೆಂದು ಹೇಳಲಾಗದ ಸ್ಥಿತಿ ಉಂಟಾಗಬೇಕು. ಈ ಸ್ಥಿತಿ ಉಂಟಾಗದಿದ್ದರೆ ನಾವು ಕಾರ್ಯವಾಗುತ್ತೇವೆ, ಪರಮಾತ್ಮ ಕಾರಣವಾಗುತ್ತಾನೆ. ಹೀಗೆ ಕಾರಣ ಮತ್ತು ಕಾರ್ಯವನ್ನು ಸ್ಪಷ್ಟವಾಗಿ ವರ್ಣಿಸಿ, ಮಾತುಗಳಲ್ಲಿ ಹೇಳಿದರೆ ನೀವು ಒಂದಕ್ಕಿಂತ ಹೆಚ್ಚು ವಾಸ್ತವವಾಗಿ ಇದೆ ಎಂಬುದನ್ನು ನಂಬುತ್ತಿರುವಂತಾಗುತ್ತದೆ. ಇದರಿಂದ ನೀವು ದ್ವಂದ್ವ ಜಗತ್ತಿನಲ್ಲಿ ಸೀಮಿತ ಭಾಗವಾಗುತ್ತೀರಿ. ಆಗ ಮಾಯಾ ಜಗತ್ತು ನಿಮ್ಮನ್ನು ಕೀಲುಗೊಂಬೆಯಂತೆ ಆಡಿಸುತ್ತದೆ.

ಹೀಗಾಗಿ ಅದು ಕಾರಣ, ಇದು ಕಾರ್ಯ ಎಂದು ಮಾತುಗಳಲ್ಲಿ ಬಂಧಿಸಿ ಯಾರಾದರೂ ಸ್ಪಷ್ಟವಾಗಿ ಹೇಳಿದಾಗ, ಅವರು ಪೂರ್ಣಜ್ಞಾನಿ ಅಲ್ಲವೆಂದು ಗ್ರಹಿಸಿ, ಪರಿಮಿತ ಮಾತುಗಳು ಕೇವಲ 1% ಮಾತ್ರ ಇವೆ ಎಂದು, ಅಪರಿಮಿತ ಮೌನವೇ 99% ಇದೆ ಎಂದು ತೀರ್ಮಾನಿಸಿ. ಹೀಗಾಗಿ ನೀವು ಬಯಸಿದ್ದನ್ನು ಸಾಧಿಸಲು, ಆ ಸಮಸ್ಯೆ ಮತ್ತು ಅದರ ಪರಿಹಾರವನ್ನು ಮಾತುಗಳಲ್ಲಿ ವರ್ಣಿಸಲು ಸಾಧ್ಯವಿಲ್ಲದ ಸ್ಥಿತಿಗೆ ತಲುಪಿ, ನೀವು ಆ ವರ್ಣನಾತೀತ ಸ್ಥಿತಿಯೊಂದಿಗೆ ಅಥವಾ ಮೌನದೊಂದಿಗೆ ಸಾಕಷ್ಟು ಸಮಯ ಏಕವಾಗಿದ್ದರೆ ಮಾತ್ರ, ನೀವು ಬಯಸಿದ್ದನ್ನು ಸೃಷ್ಟಿಸಬಹುದು ಎಂಬುದನ್ನು ಇಲ್ಲಿ ತಿಳಿಯಿರಿ.

## ಸಮಸ್ಯೆ - ಪರಿಹಾರ

ಹಾಗೆಯೇ ಅನಾರೋಗ್ಯ ಅಥವಾ ಆರ್ಥಿಕ ಅಥವಾ ಮತ್ತಾವುದೇ ಸಮಸ್ಯೆಯನ್ನು ತೆಗೆದುಕೊಂಡು ಅದಕ್ಕೆ ಸಂಬಂಧಿಸಿದ ನಂಬಿಕೆಗಳನ್ನು ಹೇಗೆ ಬದಲಿಸಬೇಕು, ಇದರ ಬಗ್ಗೆ ವಿವರಿಸಿ ಎಂದು ನನ್ನನ್ನು ಕೇಳುತ್ತಿದ್ದಾರೆ. ಇದಕ್ಕೆ ನಾನು ನೀಡುವ ಉತ್ತರವೇನೆಂದರೆ, ಇಲ್ಲಿ ಸಮಸ್ಯೆ ಅನಾರೋಗ್ಯ ಅಥವಾ ಆರ್ಥಿಕವಲ್ಲ, ಇಡೀ ಜಗತ್ತೇ ಸಮಸ್ಯೆ. ಏಕೆಂದರೆ, ಜಗತ್ತಿನಲ್ಲಿ ಸಮಸ್ಯೆಯೇ ಇರುತ್ತದೆ, ಪರಿಹಾರವಿರುವುದಿಲ್ಲ. ಮತ್ತಷ್ಟು ಹೇಳುವುದಾದರೆ ಜಗತ್ತಿನಲ್ಲಿ ಸಮಸ್ಯೆ ಅಲ್ಲ, ಜಗತ್ತೇ ಸಮಸ್ಯೆ. ಈ ಜಗತ್ತಿನಲ್ಲಿ ನಿಮಗೆ ಪರಿಹಾರ ಲಭಿಸಿದರು ಅದು ತಾತ್ಕಾಲಿಕವಾಗಿ ಮಾತ್ರ ಉಪಶಮನವನ್ನು ನೀಡುತ್ತದೆ.

ಅನಾರೋಗ್ಯಕ್ಕೆ ಕಾರಣ ಕೆಟ್ಟ ಆಹಾರ, ವಾತಾವರಣ ಇತ್ಯಾದಿಗಳು ಎಂಬುದಾಗಿ ನಾವು ಈ ಜಗತ್ತಿನಲ್ಲಿಯೇ ಹುಡುಕುತ್ತೇವೆ. ಹಾಗೆಯೇ ಆರೋಗ್ಯಕ್ಕೆ ಕಾರಣವನ್ನು ಇದೇ ಜಗತ್ತಿನಲ್ಲಿ ಹುಡುಕುತ್ತೇವೆ. ಆದರೆ ಇವು ಎಲ್ಲವೂ ಸೃಷ್ಟಿಗಳು (Creations). ಒಂದು ಸೃಷ್ಟಿ ಮತ್ತೊಂದು ಸೃಷ್ಟಿಗೆ ಕಾರಣವಲ್ಲ, ಸೃಷ್ಟಿಕರ್ತನೇ ಆ ಸೃಷ್ಟಿಗೆ ಕಾರಣ. ಒಳ್ಳೆಯ ಆಹಾರ ಆರೋಗ್ಯಕ್ಕೆ ಸೃಷ್ಟಿಕರ್ತನಲ್ಲ, ಕೆಟ್ಟ ಆಹಾರ ಅನಾರೋಗ್ಯವನ್ನು ಸೃಷ್ಟಿಸಿಲ್ಲ. ಏಕೆಂದರೆ ಇವೆಲ್ಲವೂ ಸೃಷ್ಟಿಯೇ, ನಿಮ್ಮೊಂದಿಗೆ ಇವೆಲ್ಲವೂ ಒಟ್ಟಿಗೆ ಹುಟ್ಟಿ ಬೆಳೆದು ಕೊನೆಗೊಳ್ಳುತ್ತಿದ್ದಾವೆ.

ಅಂದರೆ ಈ ಮಾಯಾ ಜಗತ್ತು ಎಂಬ ಸಿನಿಮಾದಲ್ಲಿ ಒಂದು ಪಾತ್ರ ಮತ್ತೊಂದು ಪಾತ್ರವನ್ನು ಸೃಷ್ಟಿಸಿಲ್ಲವೆಂದು, ಸೃಷ್ಟಿಕರ್ತ(ಸೂತ್ರಧಾರಿ) ಅಥವಾ ನಿರ್ದೇಶಕನೇ ಪಾತ್ರಗಳನ್ನು ಮತ್ತು ಪಾತ್ರಗಳ ಕಷ್ಟಸುಖಗಳನ್ನು ಸೃಷ್ಟಿಸುತ್ತಿದ್ದಾನೆ ಎಂಬುದನ್ನು ಇಲ್ಲಿ ಗ್ರಹಿಸಿ.

ಈ ಪ್ರಪಂಚವನ್ನು ಸೃಷ್ಟಿಸಿದ ಸೃಷ್ಟಿಕರ್ತ (creator), ಪ್ರಪಂಚ ಹುಟ್ಟುವ ಮುಂಚೆಯೇ ಇದ್ದು, ಪ್ರಪಂಚಕ್ಕೆ ಅತೀತವಾಗಿ ಇರುತ್ತಾನೆ ಆಗಲಿ, ಪ್ರಪಂಚದೊಳಗೆ ಯಾವುದೋ ಒಂದು ಸ್ಥಳದಲ್ಲಿ ಸೀಮಿತವಾಗಿ ಬಂಧಿಯಾಗಿರುವುದಿಲ್ಲ. ಹಾಗೆಯೇ

ಈ ದೈವಕ್ಕೆ ಜನನ ಮರಣಗಳಿಲ್ಲ. ಆದುದರಿಂದ ಆರೋಗ್ಯ - ಅನಾರೋಗ್ಯವನ್ನು ಯಾರು ಸೃಷ್ಟಿಸಿದಾರೋ ಅವರೇ ಕಾರಣ. ಇಲ್ಲಿ ಅನಾರೋಗ್ಯ - ಆರೋಗ್ಯ, ಪಾಸಿಟಿವ್-ನೆಗಟಿವ್ ನ್ಯೂಟ್ರಲ್... ಹೀಗೆ ಎಲ್ಲವನ್ನು ಸೃಷ್ಟಿಸಿದವನು ಆ ದೈವ. ಆದರಿಂದ ಆ ದೈವವೇ ಮೂಲ ಕಾರಣ. ಆದರೆ ಈ ಮೂಲ ಕಾರಣವನ್ನು ನಾವು ಮಾತುಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

ಹೀಗಾಗಿ ಯಾವುದೇ ಸಣ್ಣ ಸಮಸ್ಯೆಗೆ ಪರಿಹಾರ ಬೇಕಾದರೂ, ಅತೀತದಲ್ಲಿ ಇರುವ ದೇವರೊಂದಿಗೆ ಏಕವಾಗಬೇಕು ; ಯಾವುದಾದರೂ ಒಂದು ಸಮಸ್ಯೆಯ ಕಡೆ ಗಮನ ಹರಿಸದೆ, ಇಡಿ ಪ್ರಪಂಚವನ್ನು ಸಮಸ್ಯೆಯಾಗಿ ಭಾವಿಸಿ, ಪ್ರಪಂಚಕ್ಕೆ ಸಂಬಂಧಿಸಿದ ನಂಬಿಕೆಗಳನ್ನು ಬದಲಾಯಿಸಬೇಕು. ಆಗಲೇ ಅತೀತವಾಗಿ ಇರುವ ದೇವರು ಕಾಣಿಸಿಕೊಳ್ಳುತ್ತಾನೆ. ಹೀಗಾಗಿ ನೀವು ಏನನ್ನು ನೋಡುತ್ತಿದ್ದರು ಅದು 1% ಮಾತ್ರವೇ ಪರಿಮಿತವಾಗಿದೆ, 99% ಅಪರಿಮಿತವಾಗಿದೆ ಎಂದು ತೀರ್ಮಾನಿಸಬೇಕು.

ಹಾಗೆಯೇ ದೇಹದ ಮಟ್ಟಿಗೆ ಮಾತ್ರ ಸೀಮಿತಗೊಂಡಿರುವ ಕಷ್ಟ ಸುಖಗಳು ನಿಮಗೆ ತೊಂದರೆ ಕೊಡುತ್ತವೆ. ಏಕೆಂದರೆ ಅವುಗಳನ್ನು ನೀವು ದೇಹದ ಮಟ್ಟಿಗೆ ಮಾತ್ರ ಸೀಮಿತಗೊಳಿಸಿ ಬಂಧಿಸುತಿದ್ದೀರಿ. ಇದರಿಂದಾಗಿ ನೀವು ಸಹ ಸ್ವೇಚ್ಛೆಯನ್ನು ಕಳೆದುಕೊಂಡು ದೇಹದ ಮಟ್ಟಿಗೆ ಮಾತ್ರ ಸೀಮಿತಗೊಳ್ಳುತ್ತಿದ್ದೀರಿ. ಆದರಿಂದ, ನನ್ನೊಂದಿಗೆ (ನನ್ನನ್ನು ಸೇರಿದಂತೆ) ನನಗೆ ಇರುವ ಕಷ್ಟ ಸುಖಗಳೆಲ್ಲ ವಿಶ್ವವೆಲ್ಲ ವ್ಯಾಪಿಸಿದ್ದವೆಂದು ಭಾವಿಸಿ. ಆಗ ಸೀಮಿತವಾಗಿರುವ ಈ ಕಷ್ಟ ಸುಖಗಳೆಲ್ಲ ದಿವ್ಯವಾದ ಶಕ್ತಿಗಳಾಗಿ ಪರಿವರ್ತಿತಗೊಳ್ಳುತ್ತವೆ.

ಉದಾಹರಣೆಗೆ, ಕಾಲಿನ ಹತ್ತಿರ ನೋವು ಇದ್ದರೆ, ಆ ನೋವು ಕೇವಲ ಕಾಲಿನ ಹತ್ತಿರ ಮಾತ್ರ ಇದೆ ಎಂದು ಭಾವಿಸಿ, ಅದನ್ನು ನೀವು ಕೇವಲ ಅಲ್ಲಿಯೇ ಅನುಭವಿಸಿದರೆ, ಅದು ನಿಮಗೆ ತೊಂದರೆ ನೀಡುತ್ತದೆ. ಹಾಗಲ್ಲದೆ ನೋವು ಶರೀರವೆಲ್ಲ ವಿಶ್ವವೆಲ್ಲ ವ್ಯಾಪಿಸಿದೆ ಎಂದು ಭಾವಿಸಿ ಅದನ್ನು ಅನುಭವಿಸಿದರೆ, ಅದು ನಿಮಗೆ ಆನಂದಾನುಭೂತಿಯನ್ನು ನೀಡುತ್ತದೆ. ಹಾಗೆಯೇ, ಒಳ್ಳೆದು ಅಥವಾ ತಟಸ್ಥ ಅಥವಾ ದಿವ್ಯಾನುಭೂತಿಗಳನ್ನು ಯಾವುದು ಒಂದು ಭಾಗದಲ್ಲಿ ಅನುಭವಿಸಿದಾಗ, ಆರಂಭದಲ್ಲಿ ನಿಮಗೆ ಆಹ್ಲಾದಕರವಾಗಿ ಇರಬಹುದು. ಆದರೆ ಅದು ಸಹ ಸ್ವಲ್ಪ ಸಮಯದ ನಂತರ ದುಃಖವನ್ನು ಕೊಡುತ್ತದೆ, ಏಕೆಂದರೆ ಇವುಗಳನ್ನು ನೀವು ಸೀಮಿತವಾಗಿಸಿ ಬಂಧಿಸುತ್ತಿದ್ದೀರಿ ಹೊತ್ತು, ಇವುಗಳ ಸಹಜ ಸ್ಥಿತಿಯಾದ ಅಸೀಮಿತ ಸ್ವಭಾವವನ್ನು ಅರಿತು ಇವುಗಳನ್ನು ಅಪರಿಮಿತದೊಂದಿಗೆ ಏಕ ಮಾಡುತ್ತಿಲ್ಲ ಆದರಿಂದ.

ಹಾಗೆಯೇ ನಿಮ್ಮ ಮಗು, ನನಗೆ ನೋವು ಇದೆ ಎಂದು ನಿಮಗೆ ಹೇಳಿದರೆ, ನಮ್ಮ ಮಗುವಿಗೆ ನೋವು ಇದೆ ಎಂಬ ಆಲೋಚನೆ ನಿಮ್ಮೊಳಗೆ ನೆನಪಾಗಿ ಉಳಿದರೆ, ಆ ನೋವು ನಿಮಗೂ ಬರುವ ಸಾಧ್ಯತೆ ಇದೆ. ಏಕೆಂದರೆ ನೀವು ಅದನ್ನು ಸೀಮಿತ ಶಕ್ತಿ ಎಂದು ಭಾವಿಸಿ ಆ ನೋವನ್ನು ಬಂಧಿಸಿದ್ದೀರಿ ಆದರಿಂದ. ಆದುದರಿಂದ ನಮ್ಮ ಮಗುವಿಗೆ ಇರುವ ನೋವು ವಿಶ್ವವೆಲ್ಲ ವ್ಯಾಪಿಸಲಿ ಎಂದು ಅಂದುಕೊಳ್ಳಿ. ಹಾಗೆಯೇ ಅವನು ಕೆಟ್ಟವನು, ಇವನು ಒಳ್ಳೆಯವನು ಎಂಬ ನೆನಪುಗಳು ನಿಮ್ಮಲ್ಲಿದ್ದರೆ, ಆ ಗುಣಗಳು ನಿಮಗೂ ಬರಬಹುದಾದ ಸಾಧ್ಯತೆ ಇದೆ. ಆದರಿಂದ ನನ್ನೊಳಗೆ ಇರುವ ಒಳ್ಳೆಯ - ಕೆಟ್ಟ ನೆನಪುಗಳು, ನನಗೆ ಸಂಬಂಧಿಸಿದಂತೆ ಇತರರೊಳಗೆ ಇರುವ ಒಳ್ಳೆಯ ಕೆಟ್ಟ ನೆನಪುಗಳು, ಹಾಗೆಯೇ ಈ ಸೃಷ್ಟಿಯಲ್ಲಿ ಇರುವ ನಿಮಗೆ ಸಂಬಂಧಿಸದ ನೆನಪುಗಳೆಲ್ಲವೂ ಅನಂತದಲ್ಲಿ ಬೆರೆಯಬೇಕು ಎಂದು ಭಾವಿಸಿ. ಏಕೆಂದರೆ ಸೂಕ್ಷ್ಮಸ್ಥಾಯಿಯಲ್ಲಿ ಈ ಸೃಷ್ಟಿಯಲ್ಲಿ ಇರುವುದೆಲ್ಲಾ, ಒಂದರ ಮೇಲೆ ಮತ್ತೊಂದು ಅವಲಂಬಿತವಾಗಿವೆ

(interdependent). ಹೀಗೆ ನೀವು ಎಲ್ಲಾ ಹಂತಗಳಲ್ಲಿ (ಚಿತ್ರಗುಪ್ತನ ಹಂತದಲ್ಲಿಯೂ ಸಹ akashic records) ಸ್ಮೃತಿಗಳನ್ನು ಅನಂತದಲ್ಲಿ ಸೇರಿಸಿದಾಗ ಮಾತ್ರ, ನಿಮ್ಮೊಂದಿಗೆ ಎಲ್ಲರನ್ನೂ ಮತ್ತು ವಿಶ್ವದಲ್ಲಿರುವ ಎಲ್ಲವನ್ನು ದಿವ್ಯವಾಗಿ ಅನುಭವಿಸಬಹುದು.

ಸೀಮಿತವಾಗಿ ಸಂಗ್ರಹವಾಗಿರುವ ನಾಮರೂಪ- ಕ್ರಿಯಗಳು: ಅಂದರೆ ರೂಪಗಳು, ಆಲೋಚನೆಗಳು, ಮನೋಭಾವನೆಗಳು, ಭಾವನೆಗಳು, ಗುಣಗಳು, ಪಾತ್ರಗಳು, ವಾಸನೆಗಳು, ಜ್ಞಾಪಕಗಳು, ನಂಬಿಕೆಗಳು; ಇವೆಲ್ಲವೂ ಪರಿಮಿತವಾಗಿ ಈ ಸೃಷ್ಟಿಯಲ್ಲಿ ಎಲ್ಲೆಲ್ಲಿ ಸ್ಟೋರ್ ಆಗುತ್ತಿವೆಯೋ, ಅವೆಲ್ಲವೂ ಅನಂತದಲ್ಲಿ ಆಕಾಶದಲ್ಲಿ ಬೆರೆತು ಹೋಗಬೇಕೆಂದು ಸಂಕಲ್ಪಿಸಿ; ಈ ಸೃಷ್ಟಿಯನ್ನು ನಡೆಸುತ್ತಿರುವ ಪರಮಾತ್ಮನಿಗೆ ಶರಣಾಗಿ ಪ್ರಶಾಂತವಾಗಿ ಇರಬೇಕು. ಈ ಸೀಮಿತ ಜ್ಞಾಪಕಗಳು ಪರಿಮಿತವಾಗಿ ಈ ಸೃಷ್ಟಿಯಲ್ಲಿ ಎಲ್ಲೆಲ್ಲಿ ಸ್ಟೋರ್ ಆಗುತ್ತಿವೆಯೋ, ಅವೆಲ್ಲವೂ ಅನಂತದಲ್ಲಿ ಬೆರೆತು ಹೋದಾಗ ಮಾತ್ರ ನಮಗೆ ಸಂಪೂರ್ಣ ಸ್ವಾತಂತ್ರ್ಯ ಸಿಗುತ್ತದೆ.

ವಾಸ್ತವದಲ್ಲಿ ನಿಮ್ಮೊಡನೆ ಒಳಗೆ - ಹೊರಗೆ ಇರುವ ಎಲ್ಲಾ ಶಕ್ತಿಗಳು ಒಂದೇ ಸಲ ಅಪರಿಮಿತವಾಗಿ ಇರುತ್ತಲೇ ಪರಿಮಿತವಾಗಿಯೂ ಸಹ ಇದ್ದಹಾಗೆ ನಟಿಸುತ್ತಿವೆ. ಅಂದರೆ, ಇರುವುದು ಅಪರಿಮಿತವೇ, ಪರಿಮಿತವಾದವುಗಳಿಗೆ ಅಸ್ತಿತ್ವವೇ ಇಲ್ಲ, ಪರಿಮಿತವಾದುದು ನೆರಳಿನಂತಹದು. ಆದರಿಂದ ಯಾವ ಶಕ್ತಿಯಾದರೂ ಪರಿಮಿತವಾಗಿದೆ ಎಂದು ಭಾವಿಸಿದರೆ ಅದು ನಿಮಗೆ ತೊಂದರೆ ನೀಡುತ್ತದೆ, ಸದಾ ಅಪರಿಮಿತವಾಗಿಯೂ ಪರಿಮಿತವಾಗಿಯೂ ಒಂದೇ ಸಲ ಇರುತ್ತದೆ ಎಂದು ಭಾವಿಸಿದರೆ, ಅದು ದಿವ್ಯವಾದ ಶಕ್ತಿಯಾಗಿ ಪರಿವರ್ತನೆಗೊಂಡು ದಿವ್ಯವಾದ ಫಲಿತಾಂಶಗಳನ್ನು ನೀಡುತ್ತದೆ ಎಂಬುದನ್ನು ಇಲ್ಲಿ ಅರ್ಥಮಾಡಿಕೊಳ್ಳಿ.

ಸಾಮಾನ್ಯವಾಗಿ ವಿಭಿನ್ನತೆಯಲ್ಲಿದ್ದಾಗ, ಸಮಸ್ಯೆ ಒಳಗೆ ಇದೆ, ಪರಿಹಾರ ಹೊರಗೇ ಇದೆ ಎಂದು ಭಾವಿಸುತ್ತೇವೆ. ಅಂದರೆ, ಅನಾರೋಗ್ಯ ಸಮಸ್ಯೆಗೆ ಎಲ್ಲೋ ಇರುವ ವೈದ್ಯ, ಎಲ್ಲೋ ಇರುವ ಔಷಧಿಯೇ ಪರಿಹಾರ ಎಂದು, ಬಡತನಕ್ಕೆ ಎಲ್ಲೋ ಇರುವ ಹಣವೇ ಪರಿಹಾರ ಎಂದು ಭಾವಿಸುತ್ತೇವೆ. ಆದರೆ ಏಕತ್ವದಲ್ಲಿ ಸಮಸ್ಯೆ ಇಲ್ಲಿಯೇ ಇರುತ್ತದೆ, ಪರಿಹಾರವೂ ಇಲ್ಲಿಯೇ ಇರುತ್ತದೆ. ಇನ್ನೂ ಹೇಳುವುದಾದರೆ ಅದೇ ಸಮಸ್ಯೆ, ಅದೇ ಪರಿಹಾರವೂ ಆಗಿರುತ್ತದೆ. ಉದಾಹರಣೆಗೆ, ಪ್ರಪಂಚವೇ ಸಮಸ್ಯೆ, ಪ್ರಪಂಚವೇ ಪರಿಹಾರ; ಅನಾರೋಗ್ಯವೇ ಸಮಸ್ಯೆ, ಅನಾರೋಗ್ಯವೇ ಪರಿಹಾರ; ಸಂಬಂಧವೇ ಸಮಸ್ಯೆ, ಸಂಬಂಧವೇ ಪರಿಹಾರ; ಬಡತನವೇ ಸಮಸ್ಯೆ, ಬಡತನವೇ ಪರಿಹಾರವೂ ಸಹ. ಅಂದರೆ, ಬಡತನವನ್ನು 1% ಎಂದು ಭಾವಿಸಿ, ಬಡತನದಲ್ಲಿ ಅಡಗಿರುವ 99% ನಿರಾಕಾರವನ್ನು ಪರಿಹಾರವೆಂದು ಭಾವಿಸಿದರೆ ಸಾಕು. ಅಂದರೆ, ಬಡತನದೊಂದಿಗೆ ಉಳಿದ ಎಲ್ಲವೂ ಪರಿಮಿತವಾಗಿ 1% ಮಾತ್ರವೇ ಎಂದು, 99% ನಿರಾಕಾರವಾಗಿಯೂ ಅಪರಿಮಿತವಾಗಿಯೂ ಇದೆ ಎಂದು ಅರ್ಥಮಾಡಿಕೊಂಡು, ಅದನ್ನು ಅನುಭವದಲ್ಲಿ ತಂದರೆ ಸಾಕು ಎಂದು ಇಲ್ಲಿ ಗ್ರಹಿಸಿ.

ಹಾಗೆಯೇ ಈ ದೈವ ನಾನೇ ಸೃಷ್ಟಿಕರ್ತನು, ನಾನೇ ಸೃಷ್ಟಿಯು, ಇರುವುದೆಲ್ಲಾ ನಾನೇ ಇರುವುದು ಏಕವೇ, ನನ್ನ ಬಗ್ಗೆ ಮಾತುಗಳಿಂದ ವರ್ಣಿಸಿ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾನೆ ಆದರಿಂದ, ಈ ಮಾತುಗಳನ್ನು ಬಿಟ್ಟು ವರ್ಣನೆಯಾತೀತ ಸ್ಥಿತಿಗೆ ತಲುಪಿ.

## Divine will - Free will

ಹಾಗಾಗಿ ನಾನು ಹೇಗಿದ್ದರೂ, ನಾನು ಹೇಗೆ ವರ್ತಿಸಿದರೂ ಅಥವಾ ಎಂತಹ ನಂಬಿಕೆಗಳನ್ನು ಹಿಡಿದಿಟ್ಟುಕೊಂಡರೂ, ಹಾಗೆಯೇ ಜೀವಿಗಳು, ಜಗತ್ತು, ಈಶ್ವರ, ಮಾಯಾಶಕ್ತಿ ಇತ್ಯಾದಿಗಳ ಪರಿಣಾಮವು ನನ್ನ ಮೇಲೆ ಹೇಗಿದ್ದರೂ ಸಹ, ಇವೆಲ್ಲವೂ ಅಪರಿಮಿತ ದೈವದೊಂದಿಗೆ ನಾನು ಏಕವಾಗದೆ ತಡೆಯಲು ಸಾಧ್ಯವಿಲ್ಲ, ಏಕೆಂದರೆ ಎಲ್ಲರನ್ನೂ ಕೀಲು ಗೊಂಬೆಯಾಗಿ ಆಡಿಸುವುದು ಈ ಅಪರಿಮಿತ ದೈವವೇ. ಇದನ್ನು ಗ್ರಹಿಸಿ, ಈ ಭಾವನೆಯನ್ನು ಈ ನಂಬಿಕೆಯನ್ನು ಬಲವಾಗಿ ಹಿಡಿದುಕೊಳ್ಳಿ.

ನೀವು ಹೇಗಿದ್ದರೂ, ಯಾವ ಪರಿಸ್ಥಿತಿಯಲ್ಲಿದ್ದರೂ, ನೀವು ಕರೆದರೂ ಕರೆಯದಿದ್ದರೂ, ಸೀಮಿತ ನಂಬಿಕೆಗಳೊಂದಿಗೆ ನಿಮ್ಮನ್ನು ನೀವು ನಿರ್ಬಂಧಿಸಿಕೊಂಡರು ಸಹ, ಅಪರಿಮಿತ ದೈವ ತನ್ನ ಇಚ್ಛೆಯಂತೆ ನಿಮ್ಮ ಜೀವನದಲ್ಲಿ ಪ್ರತ್ಯಕ್ಷವಾಗುತ್ತಾನೆ ಹಾಗೆಯೇ ಮಾಯವೂ ಆಗುತ್ತಾನೆ ಸಹ. ಅದೇ ರೀತಿ ನೀವು ಊಹಿಸದ ಫಲಿತಾಂಶಗಳನ್ನು ನೀಡುತ್ತಾನೆ, ಹಾಗೆಯೇ ನಿಮ್ಮ ಬಳಿ ಇರುವುದನ್ನು ಊಹಿಸದ ರೀತಿಯಲ್ಲಿ ಕಿತ್ತುಕೊಳ್ಳುತ್ತಾನೆ. ಇಲ್ಲಿ ನೀವು ದೈವವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಇದನ್ನು ದೈವದ ಇಚ್ಛೆ (divine will) ಎಂದೂ ಕರೆಯುತ್ತಾರೆ.

ಒಂದು ವೇಳೆ ಪ್ರಸ್ತುತ ಸ್ಥಿತಿಯಲ್ಲಿ ಪ್ರಶಾಂತವಾಗಿ ಸಾಕಷ್ಟು ಸಮಯ ನೀವು ಇದ್ದರೆ; ಅಥವಾ ನಿಮ್ಮನ್ನು ಸೇರಿಸಿ ಏನನ್ನೂ ಬದಲಾಯಿಸುವ ಅಗತ್ಯವಿಲ್ಲ, ಎಲ್ಲವೂ ಪರ್ಫೆಕ್ಟ್ ಆಗಿ ನಡೆಯುತ್ತಿದೆ, ಎಲ್ಲರೂ ಪರ್ಫೆಕ್ಟ್ ಆಗಿದ್ದಾರೆ, ಸೃಷ್ಟಿಯೆಲ್ಲ ಪರ್ಫೆಕ್ಟ್ ಆಗಿದೆ ಎಂಬ ದಿವ್ಯ ಅನುಭವ ನಿಮಗಿದ್ದರೆ; ಅಥವಾ ನಾನು ಹೊರತು ಇನ್ಯಾರು ಇಲ್ಲ ಎಂಬ ಏಕತ್ವ ಅನುಭವ (Oneness) ನಿಮಗಿದ್ದರೆ; ಅಥವಾ ಪರಮಾತ್ಮ ನೀನು ಹೊರತು ಇನ್ಯಾರು ಇಲ್ಲ ಎಂಬ ಏಕತ್ವ ಅನುಭವ (Singularity, Unity) ನಿಮಗಿದ್ದರೆ; ಆಗ ನಿಮಗೆ ಸಂಕಲ್ಪ ಸ್ವೇಚ್ಛೆ (Free Will) ದೊರೆಯುತ್ತದೆ. ಇಂತಹ ದಿವ್ಯಸ್ಥಿತಿಯೊಂದಿಗೆ ನೀವು ಒಂದಾಗಿದ್ದಾಗ, ನೀವು ಬಯಸಿದ ಅನುಭವವನ್ನು ತಕ್ಷಣವೇ ಸೃಷ್ಟಿಸಬಹುದು. ಅಂದರೆ ನೀವು ಸಹ ಪರಮಾತ್ಮನಂತೆ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡಬಲ್ಲಿರಿ.

ಹೀಗಾಗಿ ಪರಮಾತ್ಮನು ನಿಮ್ಮ ಬಳಿ ಇರುವುದನ್ನು ಆಕಸ್ಮಿಕವಾಗಿ ತೆಗೆದುಕೊಂಡರೆ, ಅಥವಾ ನಿಮ್ಮ ಪ್ರಾರಬ್ಧದ ಪ್ರಕಾರ ನಿಮ್ಮ ಮುಂದೆ ಏನಾದರೂ ಸಮಸ್ಯೆ ಬಂದರೆ, ಆಗ ನೀವು ನಿಮ್ಮ ಸಂಕಲ್ಪ - ಸ್ವೇಚ್ಛೆಯನ್ನು ಉಪಯೋಗಿಸಿ ನಿಮ್ಮ ಸಮಸ್ಯೆಗೆ ತಕ್ಷಣವೇ ಪರಿಹಾರವನ್ನು ಪಡೆಯಬಹುದು ಅಥವಾ ನಿಮಗೆ ಬೇಕಾದುದನ್ನು ತಕ್ಷಣವೇ ಸೃಷ್ಟಿಸಬಹುದು ಎಂಬುದನ್ನು ಸದಾ ಈ ದ್ವಂದ್ವ ವಿಶ್ವದಲ್ಲಿ ಇದ್ದಾಗ ನೆನಪಿಟ್ಟುಕೊಳ್ಳಿ.

ಅಂದರೆ ದ್ವಂದ್ವ ಲೋಕದಲ್ಲಿ ಅಥವಾ ಮಾಯಾ ಲೋಕದಲ್ಲಿ ನಾವು ಸೀಮಿತ ಭಾಗವಾಗಿ ಇದ್ದೀವಿ ಎಂದು ನಾವು ಭಾವಿಸಿದರೆ ನಮಗೆ ಸಂಕಲ್ಪ ಸ್ವೇಚ್ಛೆ ಇರುವುದಿಲ್ಲವೆಂದು; ಏಕತ್ವದ ಲೋಕದೊಂದಿಗೆ ಅಥವಾ ದಿವ್ಯವಾದ ಲೋಕದೊಂದಿಗೆ ಒಂದಾಗಿದ್ದರೆ ಮಾತ್ರ ನಮಗೆ ಸಂಕಲ್ಪ ಸ್ವೇಚ್ಛೆ ಇರುವುದೆಂದು ಇಲ್ಲಿ ಗ್ರಹಿಸಿ.

ನಾವು ಸಾಮಾನ್ಯವಾಗಿ ವಿಧಿ ಅಥವಾ ಭಗವದ್ಛೆಯಲ್ಲಿ ಏನಿದೆಯೋ ಅದು ನಮ್ಮ ಬಳಿ ಬರುತ್ತದೆ ಎಂದು ಭಾವಿಸುತ್ತೇವೆ. ಅಂದರೆ, ಒಳ್ಳೆಯದಿದ್ದರೆ ಒಳ್ಳೆಯದು, ಕೆಟ್ಟದಿದ್ದರೆ ಕೆಟ್ಟದು ಬರುತ್ತದೆ ಎಂದು ಭಾವಿಸುತ್ತೇವೆ. ಆದರೆ ಇಂದಿನಿಂದ ಈ ನಂಬಿಕೆಯನ್ನು ಸಹ ಬದಲಾಯಿಸಿ. ಎಲ್ಲಾ ವಿರೋಧಗಳು ಅಥವಾ ತ್ರಿಗುಣಗಳು ಸಮಾನ ಅನುಪಾತದಲ್ಲಿ ಬೆರೆತು ಏಕವಾಗಿರುವ ಸ್ವಚ್ಛವಾದ ಶಕ್ತಿಚೈತನ್ಯ ಮಾತ್ರ, ವಿಧಿಯಿಂದ ಭಗವದಿಚ್ಛೆಯಿಂದ ಎಲ್ಲರಿಂದ ನನ್ನ ಹತ್ತಿರ ಬರುತ್ತದೆ ಎಂದು

ಭಾವಿಸಿ. ಹಾಗೆಯೇ, ನಾನು ಸಹ ತ್ರಿಗುಣಗಳು (ಒಳ್ಳೇದು, ಕೆಟ್ಟದು, ತಟಸ್ಥ) ಸಮಾನ ಅನುಪಾತದಲ್ಲಿ ಬೆರೆತು ಏಕವಾಗಿರುವ ಸ್ವಚ್ಛವಾದ ಶಕ್ತಿಚೈತನ್ಯವನ್ನು ಎಲ್ಲರಿಗೂ ಕಳುಹಿಸುತ್ತೇನೆ ಎಂದು ಭಾವಿಸಿ, ಈ ಸ್ಥಿತಿಯೊಂದಿಗೆ ಒಂದಾಗಿರುವಾಗ ಮಾತ್ರ ನಮಗೆ ಸಂಕಲ್ಪ ಸ್ವೇಚ್ಛೆ ಇರುತ್ತದೆ ಎಂದು ಇಲ್ಲಿ ಗ್ರಹಿಸಿ. ಅಂದರೆ, ಒಳಗೆ ಹೊರಗೆ ಇರುವ ಎಲ್ಲದರಿಂದ ಎಲ್ಲದಕ್ಕೂ ಸ್ವಚ್ಛವಾದ ಶಕ್ತಿಚೈತನ್ಯ ಮಾತ್ರ ಹರಿಯಬೇಕು ಎಂದು ಭಾವಿಸಿ.

ಹಾಗೆಯೇ ಈ ಸೃಷ್ಟಿಯಲ್ಲಿ ಚಲಿಸದ ಶಕ್ತಿ - ಚೈತನ್ಯ 50%, ಎಲ್ಲಾ ಕಡೆ ಚಲಿಸುವ ನಿರಾಕಾರ ಶಕ್ತಿ - ಚೈತನ್ಯ 49%, ಶಕ್ತಿ - ಚೈತನ್ಯದಿಂದ ನಿರ್ಮಿತವಾದ ನಾಮರೂಪ ಕ್ರಿಯಗಳು 1% ಇವೆ ಎಂದು ಮೇಲೆ ತಿಳಿಸಿದ್ದೇನೆ. ಈ ಮೂರರಲ್ಲಿ ಯಾರು ಕರ್ಮಕ್ಕೆ ಬಂಧಿಯಾಗುತ್ತಾರೆ? 50% ಎನ್ನುವುದು ಕರ್ಮಕ್ಕೆ ಬಂಧಿಯಾಗುವುದಿಲ್ಲ, ಏಕೆಂದರೆ ಅದು ಚಲಿಸುವುದಿಲ್ಲ. ಅದೇ ರೀತಿ 49% ಸಹ ಎಲ್ಲೆಡೆ ಚಲಿಸುತ್ತಿರುವುದರಿಂದ, ಅದಕ್ಕೆ ರಾಗ - ದ್ವೇಷಗಳಿಲ್ಲ. ಹೀಗಾಗಿ ಅದು ಸಹ ಕರ್ಮಕ್ಕೆ ಬಂಧಿಯಾಗುವುದಿಲ್ಲ, ಏಕೆಂದರೆ ಅದು ಎಲ್ಲೆಡೆ ಒಳಗೆ ಹೊರಗೆ ಚಲಿಸುತ್ತಿರುತ್ತದೆ. ಉಳಿದಿರುವ 1% ಮಾತ್ರಕ್ಕೆ ಕರ್ಮ ಸಿದ್ಧಾಂತ ಕೆಲಸ ಮಾಡುತ್ತದೆ. ಏಕೆಂದರೆ ಇದು ರೂಪವಾಗಿದ್ದು ಒಂದೇ ಬಾರಿ ಒಂದೇ ಕಡೆಗೆ ಚಲಿಸುತ್ತದೆ.

ಇಲ್ಲಿ 1% ರೂಪಗಳಿಗೆ, ಶಕ್ತಿ- ಚೈತನ್ಯಕ್ಕೆ ನೀಡುವುದು ಈ 99% ಆಗಿರುತ್ತದೆ. ಆದರಿಂದ, ಮೊದಲಿಗೆ ನೀವು 99% ಅನ್ನು ಅನುಭವಿಸಿ, 99% ಆಗಿ ಇದ್ದು; ನಂತರ 1% ರೂಪಗಳಿಗೆ ನೀವು, ತ್ರಿಗುಣಗಳು ಸಮಾನ ಅನುಪಾತದಲ್ಲಿ ಬೆರೆತು ಏಕವಾಗಿರುವ ಸ್ವಚ್ಛವಾದ ಶಕ್ತಿ-ಚೈತನ್ಯವನ್ನು ನೀಡಿರಿ. ಆಗ ರೂಪಗಳು ಸಹ ನೀವು ಕೊಟ್ಟಿದ್ದನ್ನೇ ನಿಮಗೆ ಹಿಂತಿರುಗಿಸುತ್ತವೆ, ಏಕೆಂದರೆ ಅವುಗಳ ಬಳಿ ಬೇರೆ ಶಕ್ತಿಯಿಲ್ಲ. ನೀವು ಹೀಗೆ ಮಾಡುತ್ತಾ ಹೋದರೆ, ಈ 99% ಮತ್ತು 1% ಎನ್ನುವ ವಿಭಜನೆ ಸಹ ಮಾಯವಾಗಿ ಏಕತ್ವವೇ ಉಳಿಯುತ್ತದೆ.

## ಸಾಧನೆ

ಕ್ವಾಂಟಮ್ ಫಿಸಿಕ್ಸ್ ಪ್ರಕಾರ ಈ ಸೃಷ್ಟಿಯಲ್ಲಿರುವ ಪ್ರತೀ ಅಣು 1% ಮಾತ್ರವೇ ಆಕಾರದಿಂದ (Particle), 99% ನಿರಾಕಾರದಿಂದ (Wave) ತಯಾರಾಗಿದೆ. ಆದರಿಂದ ನೀವು ಕಣ್ಣುಗಳನ್ನು ತೆರೆದು ಜಾಗೃತಿಯಿಂದ ಈ ಜಗತ್ತಿನೊಂದಿಗೆ ಇರುವಾಗ, ನಿಮ್ಮ ಇಂದ್ರಿಯಗಳ ಮೂಲಕ ನೀವು ಹೊರಗೆ ಒಳಗೆ ಏನನ್ನು ಗ್ರಹಿಸಿದರೂ, ಇದು ಕೇವಲ 1% ಮಾತ್ರ ಆಕಾರವೆಂದು (ಶಬ್ದ, ಸ್ಪರ್ಶ, ರೂಪ, ರಸ, ಗಂಧ, see smell taste touch hear), 99% ನಿರಾಕಾರವೆಂದು (independent bliss) ಜಡ್ಜ್ ಮಾಡಿ.

ಹಾಗೆಯೇ ನಿಮ್ಮ ಜೀವನದಲ್ಲಿ ಏನು ನಡೆಯುತ್ತಿದ್ದರೂ, ಏನನ್ನೂ ಬದಲಾಯಿಸುವ ಅಗತ್ಯವಿಲ್ಲ, ಎಲ್ಲವೂ ಪರ್ಫೆಕ್ಟ್ ಆಗಿ ನಡೆಯುತ್ತಿದೆ, ಎಲ್ಲರೂ ದೈವ ಸಹಾಯದಿಂದ ದಿವ್ಯವಾಗಿದ್ದು ದಿವ್ಯವಾದ ಕೆಲಸಗಳನ್ನು ಮಾಡುತ್ತಿದ್ದಾರೆ, ಸೃಷ್ಟಿ ಸಂಪೂರ್ಣ ಪರ್ಫೆಕ್ಟ್ ಆಗಿದೆ, ಎಲ್ಲವೂ ದಿವ್ಯವಾಗಿ ನಡೆಯುತ್ತಿದೆ ಎಂಬ ಭಾವನೆಯನ್ನು ಸದಾ ಹೊಂದಿರಬೇಕು. ಒಂದು ವೇಳೆ ನಿಮಗೆ ಇದು ತಪ್ಪು, ಇದು ಸರಿಯೆಂದು ಅನಿಸಿದರೆ, ನೀವು ತಪ್ಪು- ಸರಿ ಎನ್ನುವುದರಲ್ಲಿ ಸಿಲುಕಿದರೆ, ನಿಮ್ಮ ಜೀವನದಲ್ಲಿ ನೀವು ನಿರೀಕ್ಷಿಸಿದಂತೆ ನಡೆಯುತ್ತಿಲ್ಲವೆಂದು ಅನಿಸಿದರೆ, ತಕ್ಷಣ ಆ ಭಾವನೆಯನ್ನು ಬದಲಿಸಿ ಎಲ್ಲವೂ ಪರ್ಫೆಕ್ಟ್ ಆಗಿ ದಿವ್ಯವಾಗಿ ನಡೆಯುತ್ತಿದೆ ಎಂದು ನಿರ್ಣಯಿಸಿ. ಹೀಗೆ ನೀವು ಜಡ್ಜ್ ಮಾಡುತ್ತಾ ಈ ದಿವ್ಯಾನುಭವವನ್ನು ಮುಂದುವರಿಸಿದಾಗಲೇ ಮಾತ್ರ ನಿಮಗೆ ಸಂಕಲ್ಪ ಸ್ವೇಚ್ಛೆ ಇರುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಿ.

ಆದರಿಂದ ಜೀವನದಲ್ಲಿ ಎದುರಾಗುತ್ತಿರುವ ಪರಿಸ್ಥಿತಿಗಳಿಗೆ ತಕ್ಕಂತೆ ಹೊರಗಡೆ ನಟಿಸುತ್ತಾ; ಒಳಗೆ 1% ಮಾತ್ರವೇ ಇರುವ ಒಳ್ಳೆಯ ಮತ್ತು ಕೆಟ್ಟ ವಿಷಯಗಳಿಗೆ ಜಯ - ಅಪಜಯಗಳಿಗೆ ಬೆಲೆಯನ್ನು ನೀಡದೆ, ಮೊದಲು ನೀವು ಎಲ್ಲವೂ ದಿವ್ಯವಾಗಿಯೇ ನಡೆಯುತ್ತಿದೆ ಎಂಬ ಭಾವನೆಗೆ ಪ್ರಾಮುಖ್ಯತೆಯನ್ನು ನೀಡುತ್ತಾ, ಈ ಭಾವನೆಯನ್ನು ಈ ಅನುಭೂತಿಯನ್ನು ನಿಮ್ಮ ಅಂತರಾಳದಲ್ಲಿ ಮುಂದುವರೆಸಿ. ಏಕೆಂದರೆ ನಮ್ಮ ಗುರಿ ಜಯ - ಅಪಜಯಗಳಲ್ಲ, ಅದು ಸಂಕಲ್ಪ ಸ್ವೇಚ್ಛೆ ಆದುದರಿಂದ. ದೈವ ಸೃಷ್ಟಿಯಲ್ಲಿರುವ ಎಲ್ಲವನ್ನೂ " ಇದ್ದದ್ದು ಇದ್ದ ಹಾಗೆ " ಅಂಗೀಕರಿಸಿ (Accept as it is), ಎಲ್ಲವನ್ನೂ ಸಮಾನವಾಗಿ ಗೌರವಿಸಿದಾಗಲೇ, ನಮಗೆ ಸಂಕಲ್ಪ ಸ್ವೇಚ್ಛೆ(Free Will) ಲಭಿಸುತ್ತದೆ. ಏಕೆ ನಾವು ಸೋಲುತ್ತಿದ್ದೇವೆ ಅಥವಾ ಏಕೆ ಗೆಲ್ಲುತ್ತಿದ್ದೇವೆ ಎಂಬ ಅಸ್ಪಷ್ಟ ಸ್ಥಿತಿಯಲ್ಲಿ ಸಿಲುಕದೆ; ಸಂಕಲ್ಪ ಸ್ವೇಚ್ಛೆಯೊಂದಿಗೆ ನಾವು ಇಚ್ಛಿಸುವ ತಕ್ಷಣವೇ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವುದೇ ನಮ್ಮ ಗುರಿ.

ನೀವು ಕಣ್ಣು ಮುಚ್ಚಿ ಧ್ಯಾನಿಸುತ್ತಿರುವಾಗ ಕೇವಲ 1% ಮಾತ್ರವೇ ಇರುವ ಸೀಮಿತ ಆಕಾರಗಳನ್ನು, ಆಲೋಚನೆಗಳನ್ನು, ಅನುಭೂತಿಗಳನ್ನು, ಎಲ್ಲ ವಿರೋಧಗಳನ್ನು, ಎಲ್ಲ ದ್ವಂದ್ವಗಳನ್ನು, ಎಲ್ಲ ಅಪರಿಮಿತವಾದ ನಂಬಿಕೆಗಳನ್ನು, ಎಲ್ಲಾ ಸಮಸ್ಯೆಗಳನ್ನೂ ಹಾಗೂ ಎಲ್ಲಾ ಪರಿಹಾರಗಳನ್ನೂ, ಮೂಲದೈವ(original god)-man made God ಅನ್ನು, divine will free will ಅನ್ನು, ನಾನು ಇಷ್ಟು ವರ್ಷಗಳಿಂದ ನಿಮಗೆ ನೀಡಿದ ಜ್ಞಾನವನ್ನು, ಹಾಗೆಯೇ ನಿಮಗೆ ತಿಳಿದಿರುವ ಎಲ್ಲಾ ಜ್ಞಾನವನ್ನು, ಕೊನೆಗೆ ಎಲ್ಲ ಮಾತುಗಳನ್ನೂ ಬಿಟ್ಟು, ತಕ್ಕಷ್ಟು ಸಮಯ ಪ್ರಶಾಂತವಾಗಿ ಅಥವಾ ಮೌನವಾಗಿದ್ದರೆ ಅಥವಾ ಅವುಗಳಿಗೆ ಅಂಟಿ ಮುಟ್ಟದ ಹಾಗೆ ಇದ್ದರೆ ಅಥವಾ ವರ್ಣನೆಯಾತೀತ ಸ್ಥಿತಿಯಲ್ಲಿದ್ದರೆ, ಆನಂದ ಸ್ಥಿತಿ ಅಥವಾ ನಿರಾಕಾರ ಸ್ಥಿತಿ ತಾನಾಗಿಯೇ ಪ್ರತ್ಯಕ್ಷವಾಗುತ್ತದೆ.

ಯಾವ ರೀತಿ ಉಪ್ಪನ್ನು ನೀರಿನಲ್ಲಿ ಕಲಿಸುವುದರಿಂದ ಉಪ್ಪಿನ ರುಚಿ ನೀರಿನಲ್ಲೆಲ್ಲ ಹರಡುತ್ತದೆಯೋ; ಹಾಗೆಯೇ 1% ಸೀಮಿತ ಒಳ್ಳೆಯ - ಕೆಟ್ಟ ಆಕಾರಗಳನ್ನು, ಸೀಮಿತ- ಅಸಿಮಿತ ನಂಬಿಕೆಗಳನ್ನು, ಪ್ರತ್ಯಕ್ಷವಾದ 99% ಅನಂತವಾದ ನಿರಾಕಾರ ಸ್ಥಿತಿಯಲ್ಲಿ ಸೇರಿಸಿ. ಈ ಏಕೀಕರಣದಿಂದ ಆ ಆಕಾರಗಳೂ ಸಹ ಅನಂತವಾಗುತ್ತವೆ. ಹಾಗೆಯೇ ನೀವು ಸಹ ಅನಂತದೊಂದಿಗೆ ಒಂದಾಗಿ. ಹೀಗೆ ಸೀಮಿತವು ಅನಂತವಾಗುವುದರಿಂದ, ಜೀರೋ ಸ್ಟೇಟ್ ಅಥವಾ ಶೂನ್ಯ ಸ್ಥಿತಿ ಅಥವಾ ಏಕತ್ವ ಸ್ಥಿತಿ ಅಥವಾ ಬ್ರಹ್ಮಾನಂದ ಸ್ಥಿತಿ ಪ್ರತ್ಯಕ್ಷವಾಗುತ್ತದೆ.

ಹೀಗೆ ಆಕಾರಗಳು ಎಂದರೆ ದೇಶ, ಕಾಲ, ವಸ್ತುಗಳು, ಜೀವಜಗದೀಶ್ವರರು, ಪ್ರಾರಬ್ಧ, ಆಗಾಮಿ ಮತ್ತು ಸಂಚಿತ ಕರ್ಮಗಳು, ಭೂತ, ಭವಿಷ್ಯ, ವರ್ತಮಾನ ಸ್ಮರಣೆಗಳು, ಪಾಸಿಟಿವ್, ನೆಗಟಿವ್, ನ್ಯೂಟ್ರಲ್, ಜೀವಾತ್ಮ, ಆತ್ಮ, ಪರಮಾತ್ಮ........ ಇತ್ಯಾದಿ ಎಲ್ಲವೂ ನಿರಾಕಾರದಿಂದ ಒಂದಾಗಿ ಮಿಶ್ರಣವಾಗುವ ಮೂಲಕ, ದ್ವಂದ್ವ ವಿಭಜನೆ ಮಾಯವಾಗಿ ಏಕತ್ವವು ಉಂಟಾಗುತ್ತದೆ. ಏಕತ್ವ ಸ್ಥಿತಿಯಲ್ಲಿ, ಮಿಶ್ರಣ ಸ್ಥಿತಿಯಲ್ಲಿ, ಸಚ್ಚಿದಾನಂದ ಸ್ಥಿತಿಯಲ್ಲಿ ಎಲ್ಲವೂ ಈಗಲೆ ಇಲ್ಲಿಯೇ ಈ ಕ್ಷಣದಲ್ಲಿಯೇ ಇರುತ್ತವೆ.

ನಿಮಗೆ ಮತ್ತು ನಿಮಗೆ ಬೇಕಾದುದರ ನಡುವೆ ದೂರವಿದ್ದಾಗಲೇ, ನೀವು ಬಯಸಿದ್ದನ್ನು ಸಾಧಿಸಲು ಕಾಲಾವಕಾಶ ಬೇಕಾಗುತ್ತದೆ. ಆದರೆ ಏಕತ್ವ ಸ್ಥಿತಿಯಲ್ಲಿ, ನಿಮಗೆ ಮತ್ತು ನಿಮಗೆ ಬೇಕಾದುದರ ನಡುವೆ ಯಾವುದೇ ದೂರವಿರುವುದಿಲ್ಲ. ಆದರಿಂದ, ನೀವು ಬಯಸಿದಕ್ಷಣವೇ ನಿಮ್ಮ ಸಂಕಲ್ಪ ಸಾಕಾರವಾಗುತ್ತದೆ. ಈ ರೀತಿಯಾಗಿ, ನೀವು ಬಯಸಿದ

ಕ್ಷಣದಲ್ಲಿಯೇ ಪ್ರತಿಯೊಂದನ್ನು ಸೃಷ್ಟಿಸುತ್ತಾ (Create Instant Results), ನಾನೇ ಸೃಷ್ಟಿಕರ್ತ ಎಂದು ಅನುಭವದ ಮೂಲಕ ತಿಳಿಯಿರಿ.

## ಸಚ್ಚಿದಾನಂದ ಸ್ವರೂಪ

ನಾನು ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಎನ್ನುವ ಟಾಪಿಕ್ ನಲ್ಲಿ ನಾಲ್ಕು ಹಂತಗಳ ಬಗ್ಗೆ ಹೇಳಿದ್ದೇನೆ. 1. ಅವಯವಗಳ ಹಂತ, 2. ಎಲುಬುಗಳ ಹಂತ, 3. ಅಣುಗಳ ಹಂತ, 4. ನಿರಾಕಾರ ಶಕ್ತಿ-ಚೈತನ್ಯದ ಹಂತ. ನಿರಾಕಾರ ಶಕ್ತಿ-ಚೈತನ್ಯವು ಅಕ್ಷಯಪಾತ್ರೆಯಂತೆ ಆದರಿಂದ, ನೀವು ಪ್ರತಿದಿನ ಸೂಕ್ಷ್ಮದೊಂದಿಗೆ ಏಕವಾಗಿ, ಸ್ಥೂಲದಿಂದ ನಿಮಗೆ ಬೇಕಾದುದನ್ನು ಪಡೆದುಕೊಳ್ಳುವಂತೆ ಸೂಚಿಸಿದ್ದೇನೆ.

ಅಂದರೆ ನಾನೇ ಅಂಗವೆಂದು ಅನುಭವ ನಿಮಗಿದ್ದರೆ, ಕೇವಲ ಅಂಗಗಳು ಮಾತ್ರ ನಿಮಗೆ ಕಾಣಿಸುತ್ತವೆ. ನಾನೇ ಎಲುಬು ಎಂದು ಅನುಭವ ನಿಮಗಿದ್ದರೆ, ಕೇವಲ ಎಲುಬುಗಳು ಮಾತ್ರ ನಿಮಗೆ ಕಾಣಿಸುತ್ತವೆ. ನಾನೇ ಅಣುವು ಎನ್ನುವ ಅನುಭವ ನಿಮಗಿದ್ದರೆ, ಕೇವಲ ಅಣುಗಳು ಮಾತ್ರ ಕಾಣಿಸುತ್ತವೆ ಅಥವಾ ಅನುಭವದಲ್ಲಿ ಇರುತ್ತವೆ. ನಾನೇ ನಿರಾಕಾರ ಎಂಬ ಅನುಭವ ನಿಮಗಿದ್ದರೆ, ನೀವು ನಿರಾಕಾರದೊಂದಿಗೆ ಏಕವಾಗುತ್ತೀರಿ. ಅಲ್ಲಿ ಸಚ್ಚಿದಾನಂದ ಸ್ವರೂಪವೇ ಉಳಿಯುತ್ತದೆ.

ನೀವು ದಿನವೂ ನಂಬಿಕೆಗಳನ್ನು ಬದಲಿಸುತ್ತಾ ಅಂತರ್ ಪ್ರಯಾಣ ಮಾಡಿ ದೇವರ ಬಳಿಗೆ ತಲುಪಬೇಕು ಎಂದು ಮೇಲೆ ಸೂಚಿಸಿದ್ದೇನೆ. ಆದರೆ ಕೆಲವು ಸಮಸ್ಯೆಗಳಿಗೆ ಹೀಗೆ ಮಾಡಿದರೂ ಪರಿಹಾರ ದೊರೆಯುವುದಿಲ್ಲ.

ಅಂದರೆ ಸ್ಥೂಲ ಜಗತ್ತಿನಲ್ಲಿ ಇರುವ ಪ್ರತಿಯೊಂದೂ ನಿಮ್ಮ ಮಾತನ್ನು ಕೇಳಬೇಕು. ಕೀಲುಗೊಂಬೆಗಳಂತೆ ಆಟವಾಡಬೇಕು, ಹಾಡಬೇಕು. ಆಗ ಮಾತ್ರ, ನಿಮ್ಮ ಸಮಸ್ಯೆ ಮಾಯವಾಗಿ ನೀವು ಬಯಸಿದ್ದನ್ನು ತಕ್ಷಣವೇ ಸೃಷ್ಟಿಸಲು ಸಾಧ್ಯವಾಗುತ್ತದೆ. ಈ ರೀತಿಯಾಗಿ ನೀವು ಬಯಸಿದ್ದು ನಡೆಯಬೇಕೆಂದರೆ, ಈ ಜಗತ್ತಿನಲ್ಲಿರುವ ಪ್ರತಿಯೊಂದೂ, ಯಾರ ಮಾತನ್ನು ಮೊದಲಿನಿಂದಲೂ ಕೇಳುತ್ತಿವೆಯೋ, ಅವನೊಂದಿಗೆ ಏಕವಾಗಿ, ಅವನನ್ನು ಈ ಸ್ಥೂಲ ಜಗತ್ತಿಗೆ ತರಬೇಕು. ಏಕೆಂದರೆ ಈ ಎಲ್ಲಾ ದೇವರು ಅಥವಾ ಸಚ್ಚಿದಾನಂದಸ್ವರೂಪ ಆಡಿಸಿದಂತೆ ಆಡುತ್ತವೆ ಆದರಿಂದ. ಈ ದೈವವನ್ನು ಸ್ಥೂಲ ಜಗತ್ತಿಗೆ ತರಬೇಕು. ಆಗ ಈ ಜಗತ್ತು ದಿವ್ಯವಾದ ಜಗತ್ತಾಗಿ ಸದಾ ಅನುಭವದಲ್ಲಿ ಇರುತ್ತದೆ.

ಹೀಗಾಗಿ ಕೆಲವು ಸಮಸ್ಯೆಗಳು ಪರಿಹಾರವಾಗದೆ ಇರುವುದೇ ಸರಿಯಾದದು. ಅವು ಸ್ಥೂಲದಲ್ಲೇ ಸ್ಥಿರವಾಗಿ ತಿಷ್ಠವಾಗಿ ಇರಬೇಕು, ಇರುತ್ತವೆ ಸಹ. ಆದರಿಂದ ನಾವು ಬೇರೆ ದಾರಿ ಇಲ್ಲದೆ ಪರಮಾತ್ಮವನ್ನು ಸ್ಥೂಲಲೋಕಕ್ಕೆ ತರಲೇಬೇಕು. ಆಗ ಮಾತ್ರ ನಾವು ಅಕ್ಷಯಪಾತ್ರೆಯಂತಹ ದಿವ್ಯ ಲೋಕವನ್ನು ಅನುಭೂತಿ ಹೊಂದಿ, ತಕ್ಷಣವೇ ಬಯಸಿದ್ದನ್ನು ಸೃಷ್ಟಿಸುತ್ತಾ, ನಾನೇ ಸೃಷ್ಟಿಕರ್ತನೆಂದು ಅನುಭವ ಪೂರ್ವಕವಾಗಿ ತಿಳಿದುಕೊಳ್ಳುತ್ತೇವೆ.

ಹೀಗಾಗಿ ಅಗತ್ಯವಿಲ್ಲದೆ ನಿಮಗಿರುವ ಪರಿಮಿತ ಶಕ್ತಿಯನ್ನು ವ್ಯರ್ಥ ಮಾಡದೇ, ಈ ಸ್ಥೂಲ ಲೋಕವನ್ನು ಮತ್ತು ಇದರ ಒಳಗಿನ ವಿಷಯಗಳನ್ನು ಬದಲಾಯಿಸಲು ಪ್ರಯತ್ನಿಸುವ ಬದಲು, ಈ ಸೃಷ್ಟಿಯನ್ನು ನಡೆಸುವ ದೈವವನ್ನು, ಈ ಸ್ಥೂಲ ಲೋಕಕ್ಕೆ ತರಲು ನಿಮ್ಮ ಶಕ್ತಿಯನ್ನೂ ಜ್ಞಾನವನ್ನೂ ಬಳಸಿರಿ. ಆಗಲೇ ಶಕ್ತಿ- ಚೈತನ್ಯದಿಂದ ರೂಪುಗೊಂಡ ಜಗತ್ತಿನಲ್ಲಿ, ಅಂದರೆ ಶಕ್ತಿ- ರೂಪಗಳ ಆನಂದದ ತಾಂಡವವನ್ನು ಅನುಭವಿಸುತ್ತಾ, ನೀವೇ ಆನಂದತಾಂಡವ ಆಗುತ್ತೀರಿ.

****

## ಮೂರು ಗುಣಗಳ ಸಾಧನೆ

ನಾವು ಸಾಧಾರಣವಾಗಿ ವಿಧಿ ಲಿಖಿತೆಯಲ್ಲಿ ಏನಿದ್ದರೆ ಅದೇ ನಮ್ಮ ಹತ್ತಿರ ಬರುತ್ತದೆ ಎಂದು ನಾವು ಭಾವಿಸುತ್ತೇವೆ. ಅಂದರೆ ಒಳ್ಳೆಯದು ಇದ್ದರೆ ಒಳ್ಳೆಯದು ಅಥವಾ ಕೆಟ್ಟದ್ದು ಇದ್ದರೆ ಕೆಟ್ಟದು ಬರುತ್ತದೆ ಎಂದು ಭಾವಿಸುತ್ತೇವೆ. ಆದರೆ ಇಂದಿನಿಂದ ಈ ನಂಬಿಕೆಯನ್ನು ಸಹ ಬದಲಾಯಿಸಿ. ಎಲ್ಲ ವಿರೋಧಗಳು ಅಥವಾ ಮೂರು ಗುಣಗಳು ಸಮಾನ ಅನುಪಾತದಲ್ಲಿ ಬೆರೆತು ಏಕವಾಗಿ ಇರುವ ಸ್ವಚ್ಛವಾದ ಶಕ್ತಿ ಚೈತನ್ಯ ಎನ್ನುವುದು ವಿಧಿ ಲಿಖಿತದಿಂದ ಎಲ್ಲರಿಂದ ನನ್ನ ಬಳಿ ಬರುತ್ತದೆ ಎಂದು ಭಾವಿಸಿ. ಹಾಗೆಯೇ ನಾನು ಸಹ ಮೂರು ಗುಣಗಳು (ಒಳ್ಳೆಯದು ಕೆಟ್ಟದ್ದು ತಟಸ್ಥ) ಸಮಾನ ಅನುಪಾತದಲ್ಲಿ ಬೆರೆತು ಏಕವಾಗಿ ಇರುವ ಸ್ವಚ್ಛವಾದ ಶಕ್ತಿ ಚೈತನ್ಯವನ್ನು ಎಲ್ಲರಿಗೂ ಕಳುಹಿಸುತ್ತೇನೆ ಎಂದು ಭಾವಿಸಿ, ಈ ಸ್ಥಿತಿಯೊಂದಿಗೆ ಏಕವಾಗಿ ಇದ್ದಾಗ ನಮಗೆ ಸಂಕಲ್ಪ ಸ್ವೇಚೆ ಇರುತ್ತದೆ. ಅಂದರೆ ಒಳಗೆ ಹೊರಗೆ ಇರುವ ಎಲ್ಲದರಿಂದ ಎಲ್ಲದಕ್ಕೂ ಸ್ವಚ್ಛವಾದ ಶಕ್ತಿ ಚೈತನ್ಯ ಪ್ರವಹಿಸಬೇಕೆಂದು ಭಾವಿಸಿ.

ನಾನು 2004 ರಿಂದ ಇಲ್ಲಿಯವರೆಗೂ 1. ಧ್ಯಾನ ಮಾಡುವುದು, 2. ಪ್ರೀತಿಸುವುದು ಅಂದರೆ ತ್ರಿಗುಣಗಳನ್ನು ಇಷ್ಟವಾಗಿ ಅನುಭವಿಸುವುದು ಅಂದರೆ ಕಷ್ಟ ಸುಖಗಳನ್ನು ಅಮೃತವಾಗಿ ಪರಿವರ್ತನೆ ಮಾಡುವುದು, 3. ನಂಬಿಕೆಗಳನ್ನು ಬದಲಾಯಿಸುವುದು, ಈ ಮೂರು ಕೆಲಸಗಳನ್ನು ಪ್ರತಿದಿನ ಮಾಡಿ ನಾನು ಸಾಕಷ್ಟು ಅದ್ಭುತವಾದ ಫಲಿತಗಳನ್ನು ಸಾಧಿಸಿದ್ದೇನೆ. ಆದುದರಿಂದ ನೀವು ಸಹ ಹೀಗೆ ಮಾಡುವುದಕ್ಕೆ ಪ್ರಯತ್ನಿಸಿ.

ದಿವ್ಯ ಮಾನವ ಪುಸ್ತಕ - ವಿಷಯಗಳನ್ನು ಓದಲು ಇಲ್ಲಿ ಕ್ಲಿಕ್ ಮಾಡಿ ಓದಬಹುದು.

https://darmam.com/htmlkan.html